www.buntsanghablr.com

ನವೆಂಬರ್ 2016 ಸಂಪುಟ 12 ಸಂಚಿಕೆ 11

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಕನ್ನಡವೇ ಸತ್ಯ ಕನ್ನಡವೇ ನಿತ್ಯ





ದೀಪಾವಳಿ ಹಬ್ಬದ ಆಚರಣೆ




ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದ ಬೆಳ್ಳಿಹಬ್ಬ ಸಮಾರಂಭದ ಉದ್ಘಾಟನೆ



ದೀಪಾವಳಿ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮ

**BUNTS' SANGHA BANGALORE**
(A Charitable Institution)
324, Chord Road, Vijayanagar, Bengaluru - 560 040.
P : 080 - 2339 9323 / 2339 9635 E: info@buntsanghablr.com

ಸಂಚಿಕೆ ಬೆಲೆ ರೂ. 1/-


Swathi
Variety is the spice of life!
Happy Deepavali
Celebrate this Deepawali with Swathi Restaurants, the Mystical and authentic world of exquisite dining. Our great Tasting food is presented to you as a complete culinary masterpiece. enjoy delicious andhra cuisine at its best in an elegant and intimate ambiance. Experience the warmth and charm of our wonderful and creative cuisine in a cordial atmosphere.
RESTAURANTS · BANQUETS · CATERERS
www.swathigroup.co.in, Call @ : +91 95909 02424

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 12** **NOVEMBER 2016** **ISSUE 11**

**ಸಾಹಿತ್ಯ - ಪ್ರಕಾಶನ ಸಮಿತಿ**

**ಅಧ್ಯಕ್ಷರು :**
ಎಸ್. ಅಶೋಕ್‌ಕುಮಾರ್ ಶೆಟ್ಟಿ

**ಗೌ॥ ಸಂಪಾದಕರು:**
ರವಿರಾಜ್ ಎಸ್. ಶೆಟ್ಟಿ

**ಸಲಹಾ ಮಂಡಳಿ:**
ಶ್ರೀ ಬಿ.ಎಲ್.ಎನ್. ಹೆಗ್ಡೆ
ಶ್ರೀ ಎ. ಗಿರೀಶ್ ರೈ
ಶ್ರೀ ಎಂ. ರತ್ನಾಕರ್ ಶೆಟ್ಟಿ
ಶ್ರೀ ಸಂತೋಷ್ ಶೆಟ್ಟಿ

**ಸಂಪಾದಕರ ಮಂಡಳಿ:**
ಶ್ರೀ ಎನ್. ಗೋಪಾಲ ಶೆಟ್ಟಿ
ಶ್ರೀ ಚಂದ್ರಶೇಖರ್ ಆಳ್ವ
ಶ್ರೀ ಪ್ರಕಾಶ್ ಶೆಟ್ಟಿ. ಎಂ
ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು**
ಸಂತೋಷ್ ಶೆಟ್ಟಿ. ಜೆ

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಈ ಸಂಚಿಕೆಯಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 4 |
| 4. | ಸ್ವಚ್ಛ ಭಾರತ ಜಾಗೃತಿ ನಡಿಗೆ ಮತ್ತು ಅಭಿಯಾನ | 5 |
| 5. | ಕರ್ನಾಟಕ ಏಕೀಕರಣದ ಅರವತ್ತು ವರ್ಷಗಳು | 6 |
| 6. | ಮಹಿಳಾ ವಿಭಾಗ ದಸರಾ ಆಚರಣೆ | 9 |
| 7. | BSRNSV - Silver Jubliee Celebrations | 10 |
| 8. | ಆಯುರ್ವೇದ–ಒಂದು ಜೀವನ ಪದ್ಧತಿ | 11 |
| 9. | Clean Mind Makes a Healthy Society | 13 |
| 10. | ದತ್ತಿನಿಧಿ ಪ್ರಶಸ್ತಿಗಳು | 15 |
| 11. | ಚಿಗುರು ಪ್ರತಿಭೆಗಳು | 17 |
| 12. | Verghese Kurien-The Milkman of India | 26 |
| 13. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಸ್ಪರ್ಧೆಗಳು | 29 |
| 14. | Matrimonial | 37 |

**ಮುಖಪುಟ**

**ಕನ್ನಡ ರಾಜ್ಯೋತ್ಸವದ ಶುಭಾಷಯಗಳು**

**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ**

**'ಬೆಳ್ಳಿಹಬ್ಬ' ಸಮಾರಂಭದ ಉದ್ಘಾಟನೆ**

**ದೀಪಾವಳಿ ಸಂಭ್ರಮಾಚರಣೆ**



# ಸಂಪಾದಕೀಯ

ಕರ್ನಾಟಕ ರಾಜ್ಯೋದಯದ ವಜ್ರ ಮಹೋತ್ಸವದ ಸಂಭ್ರಮದಲ್ಲಿ ನಾವಿದ್ದೇವೆ. ಆದರೆ ಈ ಸಂಭ್ರಮದ ಮೇಲೆ ನಿರಾಶೆ ಮೂಡಿಸುವ ಅನೇಕ ವಿಚಾರಗಳು ನಮ್ಮ ಮುಂದಿದೆ. ಕನ್ನಡ ನಮ್ಮ ನಾಡಭಾಷೆಯೂ ಹೌದು. ಆಡಳಿತಭಾಷೆಯೂ ಹೌದು. ಆದರೆ ಎಲ್ಲವೂ ಕನ್ನಡಮಯವಾಗಿದೆ ಎಂದು ಧೈರ್ಯದಿಂದ ಎದೆ ತಟ್ಟಿ ಹೇಳುವ ಸ್ಥಿತಿಯಲ್ಲಿ ನಾವಿಲ್ಲ.

ಭಾಷಾವಾರು ರಾಜ್ಯಗಳ ರಚನೆಯಾಗಿದ್ದೇ ಆಯಾ ರಾಜ್ಯಗಳಲ್ಲಿ ಅಲ್ಲಿನ ಸ್ಥಳೀಯ ಭಾಷೆಗಳು ಸಾರ್ವಭೌಮತೆಯನ್ನು ಪಡೆಯಬೇಕೆಂಬ ಉದ್ದೇಶದಿಂದ. ಆದರೆ ಕರ್ನಾಟಕದಲ್ಲಿ ಇಂದು ಕನ್ನಡ ಭಾಷೆ ಅಪಾಯದ ಅಂಚಿನಲ್ಲಿದೆ. ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಮಾತೃಭಾಷಾ ಶಿಕ್ಷಣ ಮಾಧ್ಯಮ ಪೋಷಕರ ಆಯ್ಕೆಗೆ ಬಿಟ್ಟ ಸರ್ವೋಚ್ಚ ನ್ಯಾಯಾಲಯದ ತೀರ್ಪು ಪ್ರಾದೇಶಿಕ ಭಾಷೆಗಳ ಉಳಿವಿಗೆ ಕಂಟಕ ಪ್ರಾಯವಾಗಿದೆ. ಈ ಕಾಲಘಟ್ಟದಲ್ಲಿ ಕನ್ನಡಿಗರು ಕನ್ನಡವನ್ನು ಉಳಿಸಿಕೊಳ್ಳುವ ತುರ್ತು ಅನಿವಾರ್ಯತೆ ಇಂದಿನ ಅಗತ್ಯವಾಗಿದೆ.

ಜನರ ಇಂಗ್ಲೀಷ್ ಅಂದಾಭಿಮಾನ ಕನ್ನಡದ ಅಸ್ತಿತ್ವವನ್ನು ಅಲುಗಾಡಿಸುತ್ತಿದೆ. ಕನ್ನಡ ಕಲಿತ ಮಕ್ಕಳು ಬಾವಿಯ ಕಪ್ಪೆಗಳಾಗುತ್ತಾರೆ. ಇಂಗ್ಲೀಷ್ ಕಲಿಯದೆ ಮಕ್ಕಳಿಗೆ ಭವಿಷ್ಯವೇ ಇಲ್ಲ ಎಂಬ ಮನೋಭಾವವನ್ನು ವಾಸ್ತವದ ನೆಲೆಯಲ್ಲಿ ಚಿಂತನೆ ಮಾಡಬೇಕಾಗಿದೆ. ಸಾವಿರಾರು ವರ್ಷಗಳ ಇತಿಹಾಸವಿರುವ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡ ಕನ್ನಡ ಭಾಷೆ ಇಷ್ಟು ದುರ್ಬಲ ಎಂದಾದರೆ ನಮ್ಮ ಭಾಷಾ ಪ್ರೇಮವೇ ಪ್ರಶ್ನಾರ್ಹವಾಗಿದೆ.

ನಾಡು–ನುಡಿಯ ರಕ್ಷಣೆ ಬಗೆಗೆ ನಮ್ಮಲ್ಲಿರುವ ಕೀಳರಿಮೆ ಮತ್ತು ಅಸಡ್ಡೆಯನ್ನು ತೊಡೆದು ಹಾಕಬೇಕು. ಎಲ್ಲವನ್ನೂ ಲಾಭದಾಯಕವಾಗಿ ಆಲೋಚಿಸುವ ಮನಸ್ಥಿತಿ ಒಳ್ಳೆಯದಲ್ಲ. ಕರ್ನಾಟಕದಲ್ಲಿ ಕನ್ನಡ ಅನಿವಾರ್ಯ ಎಂಬ ವಾತಾವರಣ ಸೃಷ್ಠಿಸಬೇಕು. ಕನ್ನಡಿಗರೇ ಕನ್ನಡ ಮಾತಾಡಲು ಹಿಂಜರಿಯುವುದು ಸರಿಯಲ್ಲ. ಕನ್ನಡಿಗರ ಅಭಿಮಾನ ಶೂನ್ಯತೆಯಿಂದಾಗಿ ಇಲ್ಲಿ ಬದುಕುತ್ತಿರುವ ಅನ್ಯಭಾಷಿಕರು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಅದರಲ್ಲೂ ಭಾಷಾ ಸ್ಮೃತಿಯನ್ನು ಉಳಿಸಿಕೊಂಡೆ ಇಲ್ಲಿ ಬದುಕುತ್ತಾರೆ. ಕನ್ನಡಭಾಷಾ ಜ್ಞಾನವನ್ನಾಗಲೀ, ಕನ್ನಡತನದ ಯಾವ ಗುಣಗಳನ್ನು ಅವರು ತಮ್ಮದಾಗಿಸಿಕೊಳ್ಳುವುದಿಲ್ಲ. ಕನ್ನಡಿಗರ ಸಹನೆ, ಔದಾರ್ಯ ಮತ್ತು ಹೊಂದಿಕೊಳ್ಳುವ ಗುಣಗಳಿಂದಲೇ ಕನ್ನಡದ ಬೆಳವಣಿಗೆ ಸಾಧ್ಯವಾಗುತ್ತಿಲ್ಲ. ನಮ್ಮ ಒಳ್ಳೆಯತನವೇ ನಮ್ಮ ದೌರ್ಬಲ್ಯವಾಗಿದೆ.

ಕನ್ನಡ ನಾಡು–ನುಡಿಗೆ ಕನ್ನಡ ಹೋರಾಟಗಳು ಸಾಕಷ್ಟು ಕೊಡುಗೆಯನ್ನು ನೀಡಿವೆ. ಕನ್ನಡ ನೆಲ–ಜಲದ ಹೋರಾಟಗಳಿಲ್ಲದಿದ್ದರೆ ಕನ್ನಡ ಹಾಗೂ ಕನ್ನಡಿಗರ ಪರಿಸ್ಥಿತಿ ಹೇಗಿರುತ್ತಿತ್ತು ಎಂದು ಊಹಿಸಿಕೊಳ್ಳುವುದೂ ಕಷ್ಟ. ಕನ್ನಡ ಇಷ್ಟಾದರೂ ಉಳಿದಿದ್ದರೆ ಅದಕ್ಕೆ ಕನ್ನಡದ ಹೋರಾಟಗಳೇ ಕಾರಣ. ಕನ್ನಡ ಹೋರಾಟಗಳ ದೊಡ್ಡ ಪರಂಪರೆ ಇರುವ ಕನ್ನಡ ಪರ ಸಂಘಟನೆಗಳನ್ನು ಸಮಾಜ ಘಾತುಕ ಶಕ್ತಿಗಳೆಂಬಂತೆ ಬಿಂಬಿಸಲಾಗುತ್ತಿದೆ. ಇದು ಹೋರಾಟಗಾರರ ನೈತಿಕ ಸ್ಥೈರ್ಯವನ್ನು ಕುಗ್ಗಿಸುವ ಪ್ರಯತ್ನವಾಗಿದೆ. ಕನ್ನಡದ ಹೋರಾಟ ನ್ಯಾಯಯುತವೂ, ಕಾನೂನು ಬದ್ಧವೂ ಆಗಿರಬೇಕೆಂದು ಬಯಸುವುದು ತಪ್ಪೇನಲ್ಲ. ಕನ್ನಡ ಪರ ಸಂಘಟನೆಗಳ ಬಗ್ಗೆ ಟೀಕೆ ಮಾಡುವವರಿಗೆ ಕನ್ನಡ ಪರ ಹೋರಾಟಗಳೆಂದರೆ ಏನೋ ತಾತ್ಸಾರ. ಕನ್ನಡ ಉಳಿಸುವ ಮತ್ತು ರಕ್ಷಿಸುವ ದಿಕ್ಕಿನಲ್ಲಿ ಹೋರಾಟಗಳು ನಡೆಯಲೇಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎನ್ನುವ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಕನ್ನಡಪರ ಸಂಘಟನೆಗಳು ಇನ್ನಷ್ಟು ಕಾರ್ಯೋನ್ಮುಖವಾಗಬೇಕಾಗಿದೆ.

ನೆಲ, ಜಲ, ಸಂಸ್ಕೃತಿ, ಮಾತೃಭಾಷೆ ಎನ್ನುವುದು ವ್ಯಕ್ತಿಯ ಅಂತರಾಳದ ಅಸ್ಮಿತೆ. ಇಂತಹ ಭಾವನೆಯು ಕೇವಲ ಅನ್ಯ ಭಾಷೆಯೊಂದನ್ನು ಕಲಿಯುವುದರಿಂದ ಹಾಳು ಮಾಡಲು ಸಾಧ್ಯವಿಲ್ಲ. ನಾನು ಅಂಬರಕ್ಕೇರಿದಾಕ್ಷಣ ತನ್ನ ತಾಯಿ ಎಂತಹ ಗುಡಿಸಿಲಿನಲ್ಲಿದ್ದರೂ ಆಕೆಯನ್ನು ತಾಯಿಯೇ ಅಲ್ಲ ಎನ್ನುವಷ್ಟು ಮಾತೃಪ್ರೇಮ ದುರ್ಬಲವಾಗಿರಬಾರದು. ಹೆತ್ತ ತಾಯಿ, ಹೊತ್ತ ನೆಲ, ಸ್ವರ್ಗಕ್ಕಿಂತಲೂ ಮಿಗಿಲಾದುದಂತೆ. ತಾಯ್ನೆಲದ ನುಡಿ, ಸಂಸ್ಕೃತಿಯನ್ನು ಗೌರವಿಸಿ ಬಾಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

“ಎಲ್ಲಾದರೂ ಇರು; ಎಂತಾದರೂ ಇರು; ಎಂದೆಂದಿಗೂ ನೀ ಕನ್ನಡವಾಗಿರು” ಎಂಬ ಸಂದೇಶ ಕನ್ನಡಿಗರ ಸಮಷ್ಟಿ ಪ್ರಜ್ಞೆಯಾಗಬೇಕು.

ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳು.

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**



# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ಸಾಲು ಸಾಲು ಹಬ್ಬಗಳ ಸಂತಸ ಸಡಗರದೊಂದಿಗೆ ಎರಡು ತಿಂಗಳು ಕಳೆದು ನಮ್ಮೆಲ್ಲರನ್ನು ಪುಳಕಿತರನ್ನಾಗಿಸುವಲ್ಲಿ ಧಾರ್ಮಿಕ ಆಚರಣೆಗಳು ಸ್ಫೂರ್ತಿ ತುಂಬಿ ಚೈತನ್ಯ ಭರಿತ, ಉಲ್ಲಾಸದಾಯಕ ಜೀವನಾನುಭವವನ್ನು ನೀಡಿರುವುದರಲ್ಲಿ ಎರಡು ಮಾತಿಲ್ಲ.

ಹೊಸತನವೇ ಬಾಳು; ಹಳಸಿಕೆಯೆಲ್ಲ ಸಾವು ಬಿಡು ರಸವು ನವನವಿತೆಯಿಂದ ನುದಿನವು  ಹೊಮ್ಮಿ ಹಸನೊಂದು ಬಾಳ್ ನುಡಿಯಲ್ಲಿ ನಡೆಯಲ್ಲಿ, ನೋಟದಲಿ ಪಸರಿಸುತಿರೆ ಬಾಳ್‌ನ ಚೆಲುವು ಮಂಕು ತಿಮ್ಮ' ಎಂಬ ಡಿ.ವಿ.ಜಿ.ಯವರ ಮಾತನ್ನು ಮೆಲುಕು ಹಾಕೋಣ. ಅಂತಹ ಬಾಳ್ವೆ ನಿಮ್ಮದಾಗಲಿ ಎನ್ನುವ ಆಶಯದೊಂದಿಗೆ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಶುಭಕಾಮನೆಗಳೊಂದಿಗೆ ನಿಮ್ಮೊಂದಿಗೆ ಒಂದೆರಡು ನಿಮಿಷ...

ಪ್ರಥಮದಲ್ಲಿ ನಮ್ಮ ರಾಷ್ಟ್ರದ ರಕ್ಷಣೆಗಾಗಿ ಹಲವಾರು ಸೈನಿಕರು ಇತ್ತೀಚೆಗೆ ದೇಹತ್ಯಾಗ ಮಾಡಿದ್ದಾರೆ. ಚಳಿ, ಹಿಮ, ಮಳೆ ಎನ್ನದೆ ಗಡಿ ಕಾಯ್ದು ಕೊನೆಗೆ ಪ್ರಾಣಾರ್ಪಣೆಗೂ ಸಿದ್ಧರಾದ ನಮ್ಮ ಸೇನೆಗೆ ನಮನಗಳನ್ನು ಸಲ್ಲಿಸೋಣ.

ನಾಡಿನಾದ್ಯಂತ ಬಂಟ ಬಂಧುಗಳು ಸಂಘಟಿತರಾಗುತ್ತಿರುವುದು ಅತ್ಯಂತ ಹೆಮ್ಮೆಯ ಹಾಗೂ ಸಂತೋಷದ ವಿಚಾರ. ಈ ದಿಶೆಯಲ್ಲಿ ಬಂಟ್ವಾಳ ತಾಲೂಕು ಬಂಟರ ಭವನದ ಲೋಕಾರ್ಪಣೆ ಅಕ್ಟೋಬರ್ ತಿಂಗಳ 30 ಮತ್ತು 31 ರಂದು ವಿಜ್ರಂಭಣೆಯಿಂದ ಜರುಗಿ, ಬಂಟರ ಹಿರಿಮೆ ಗರಿಮೆಗಳಿಗೆ ನೀರೆರೆದಿರುವುದು ಶ್ಲಾಘನೀಯ, ಅಭಿನಂದನೀಯ ಸಮಾಚಾರ. ಸುಂದರ ಸಭಾಂಗಣ, ಜೊತೆಗೆ ಜಿಲ್ಲೆಯಾದ್ಯಂತ ಆಗಮಿಸಿದ ಬಂಟ ಬಂಧುಗಳು, ಮುಖ್ಯಮಂತ್ರಿಗಳಿಂದ ಒಂದು ಕೋಟಿ ದೇಣಿಗೆ, ಅಚ್ಚುಕಟ್ಟಾದ ವ್ಯವಸ್ಥೆ, ದೇಶವಿದೇಶಗಳಿಂದ ಆಗಮಿಸಿದ ಗಣ್ಯವ್ಯಕ್ತಿಗಳು, ಜೊತೆಗೆ ಬೆಂಗಳೂರು ಬಂಟರ ಸಂಘಕ್ಕೂ ಸ್ಥಾನ–ಮಾನ, ಗೌರವ ನೀಡಿರುವುದು ನೆನಪಿನ ಅಂಗಳದಲ್ಲಿ ಸದಾಕಾಲ ಉಳಿಯುವುದರಲ್ಲಿ ಎರಡು ಮಾತಿಲ್ಲ.

ನಮ್ಮ ಸಮಾಜಸೇವೆ ಹಾಗೂ ಯುವ ವಿಭಾಗದ ಕ್ರೀಯಾಶೀಲ ಚಟುವಟಿಕೆಗಳು, ಸ್ವಚ್ಛಭಾರತ ಅಭಿಯಾನ ಅಯ್ಯಪ್ಪ ಸ್ವಾಮಿ ದೇವಳದ ಸಮೀಪ ಶಾಸಕ ಮುನಿರಾಜು, ಸಾಂಸ್ಕೃತಿಕ ರಾಯಭಾರಿ ನೇಹಾ ಶೆಟ್ಟಿಯವರ ಸಮ್ಮುಖದಲ್ಲಿ ಉದ್ಘಾಟಿಸಲ್ಪಟ್ಟು ಸುಮಾರು 300 ಕ್ಕೂ ಮಿಕ್ಕಿದ ಸದಸ್ಯರಿಂದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಲಾಯ್ತು. ವಿಜಯವಾಣಿ ಪತ್ರಿಕೆ ನಮ್ಮ ಕಾರ್ಯಕ್ರಮಕ್ಕೆ ಶುಭಕೋರಿ, ಜೊತೆಯಲ್ಲಿದ್ದು ಬಂಟರ ಸೇವಾ ಕೈಂಕರ್ಯವನ್ನು ಶ್ಲಾಘಿಸಿ ಪ್ರಕಟಿಸಿತು.

ಸದಸ್ಯರೇ, ತಮ್ಮೆಲ್ಲರ ನಿರೀಕ್ಷೆಗಳು ಹಲವಾರು, ನಿರಂತರ ಚಟುವಟಿಕೆಗಳಿಗೆ ನಮ್ಮೆಲ್ಲ ಉಪಸಮಿತಿಗಳು ಕಾರ್ಯೋನ್ಮುಖವಾಗಿವೆ. ನಮ್ಮ ಪ್ರಗತಿಯ ಪಥದಲ್ಲಿರುವ ಅಡೆ–ತಡೆಗಳನ್ನು ನಿವಾರಿಸಿ ಕಗ್ಗಂಟಾಗಿರುವ ಸಮಸ್ಯೆಗಳನ್ನು ನಿವಾರಿಸುವಲ್ಲಿ ಇನ್ನಿಲ್ಲದ ಪ್ರಯತ್ನದಲ್ಲಿ ಖಂಡಿತವಾಗಿ ಹಿಂದೆ ಬೀಳುವುದಿಲ್ಲ ಎಂಬ ಮಾತನ್ನು ಹೇಳ ಬಯಸುತ್ತೇನೆ.

ಬಂಟರ ಸಂಘ ಒಂದು ವಿಶಾಲ ವೃಕ್ಷದ ಹಾಗೆ ಗಾಳಿ, ನೆರಳು, ಪಕ್ಷಿ ಸಂಕುಲಕ್ಕೆ  ಆಶ್ರಯ ನೀಡಿ ಪ್ರಕೃತಿಗೆ ಸೊಬಗನ್ನು ನೀಡಿದ ಮರ ನೂರ್ಕಾಲ ಬಾಳುತ್ತದೆ. ಅಂಥಹ ಸಂಘದ ಗೌರವಾನ್ವಿತ ಸದಸ್ಯರೆಂಬ ಹೆಮ್ಮೆ ನಮ್ಮೆಲ್ಲರದಾಗಲಿ.

ಹೃದಯಪೂರ್ವಕ ವಂದನೆಗಳೊಂದಿಗೆ,

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು



# ಗೌರವ ಕಾರ್ಯದರ್ಶಿಗಳ ವರದಿ

ಗೌರವಾನ್ವಿತ ಸದಸ್ಯರೇ,

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಬೆಳ್ಳಿ ಹಬ್ಬದ ಪ್ರಯುಕ್ತ ನೂತನ ಲಾಂಛನದ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ 07.10.2016 ರಂದು ಸಂಘದ ಸಭಾಭವನದಲ್ಲಿ ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಕರ್ನಾಟಕ ಸರಕಾರದ ವಸತಿ ಸಚಿವರಾದ ಶ್ರೀ ಎಂ. ಕೃಷ್ಣಪ್ಪನವರು ಮುಖ್ಯ ಅತಿಥಿಗಳಾಗಿ ಹಾಗೂ ಅರಣ್ಯ ಸಚಿವರಾದ ಶ್ರೀ ಬಿ. ರಮಾನಾಥ ರೈಯವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾಡಳಿತ ಮಂಡಳಿಯ ಅಧ್ಯಕ್ಷರಾದ ಡಾ। ಆರ್.ಎನ್. ಶೆಟ್ಟಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ವಹಿಸಿದ್ದರು. ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ಶೈಕ್ಷಣಿಕ ವರ್ಷದುದ್ದಕ್ಕೂ ಆಚರಿಸಿ, ಅಂತರ್‌ಶಾಲಾ ಕ್ರೀಡಾಕೂಟ, ವೈಜ್ಞಾನಿಕ ವಸ್ತು ಪ್ರದರ್ಶನ, ಚಿತ್ರಸಂತೆ ಸೇರಿದಂತೆ ವಿವಿಧ ಕ್ಷೇತ್ರದ ತಜ್ಞರ ಜೊತೆ ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 2017ರ ಜನವರಿ ತಿಂಗಳಲ್ಲಿ 3 ದಿನಗಳ ಅದ್ದೂರಿ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗುವುದು.

ಸಂಘದ ಯುವ ವಿಭಾಗ ಹಾಗೂ ಸಮಾಜ ಸೇವಾ ಸಮಿತಿ ಜಂಟಿಯಾಗಿ ದಿನಾಂಕ 23.10.2016 ರಂದು ನಗರದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪ್ರಮುಖ ಜನನಿಬಿಡ ಪ್ರದೇಶಗಳಲ್ಲಿ 'ಸ್ವಚ್ಛಭಾರತ ಜನ ಜಾಗೃತಿ' ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸ್ಥಳೀಯ ಶಾಸಕರಾದ ಶ್ರೀ ಬಿ. ಮುನಿರಾಜುರವರು ಉದ್ಘಾಟಿಸಿ, ಚಿತ್ರನಟಿ ನೇಹಾ ಶೆಟ್ಟಿ ಚಾಲನೆ ನೀಡಿದರು. ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯೆ ಶ್ರೀಮತಿ ಉಮಾದೇವಿ ನಾಗರಾಜ್‌ರವರು ಹಾಜರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ಸಂಘದ ಪ್ರಮುಖ ಸಾಮಾಜಿಕ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ ನೆರೆದಿದ್ದ 350 ಕ್ಕೂ ಹೆಚ್ಚಿನ ಯುವಕರಿಗೆ ಸ್ಫೂರ್ತಿ ನೀಡಿದರು. ಯುವ ವಿಭಾಗ ಹಾಗೂ ಸಮಾಜ ಸೇವಾ ಸಮಿತಿಯೊಂದಿಗೆ ವೈದ್ಯಕೀಯ ವಿಭಾಗದ ಛೇರ್‌ಮೆನ್ ಡಾ। ಜಗದೀಶ್ ಶೆಟ್ಟಿ, ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಿಧಿಯ ಕ್ರೂರತೆಯ ನಡುವೆಯೂ ಸಾವನ್ನು ಗೆದ್ದು ಬದುಕಿ ಬಂದು ಕಳೆದ 22 ವರ್ಷಗಳಿಂದ ಹಾಸಿಗೆ ಹಿಡಿದರೂ ಸ್ವಾವಲಂಬಿಯಾಗಿ ಬದುಕಬೇಕೆನ್ನುವ ಛಲದಿಂದ ಬ್ಯಾಂಕ್‌ನಲ್ಲಿ ಸಾಲ ಮಾಡಿ ವಾಹನ ಖರೀದಿಸಿ ಅದರ ಬಾಡಿಗೆಯಿಂದ ಬರುವ ಆದಾಯದಿಂದ ಬದುಕಬೇಕೆನ್ನುವ ಛಲಗಾರ ಕುಂದಾಪುರ ತಾಲೂಕಿನ ಕಾವ್ರಾಡಿ ಗ್ರಾಮದ ಸಾರ್ಕಲ್ಲಿನ ಶ್ರೀ ಜಯರಾಮ ಶೆಟ್ಟಿಯವರ ಪತ್ರಿಕಾ ಮನವಿಯನ್ನು ಗಮನಿಸಿದ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಎಲ್.ಎಲ್.ಹೆಗ್ಡೆಯವರ ಸಲಹೆಯ ಮೇರೆಗೆ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ತಮ್ಮ ಹೃದಯ ವೈಶಾಲ್ಯತೆಯಿಂದ ರೂ. 55,000/– ದೇಣಿಗೆ ಸಂಗ್ರಹಿಸಿ ದಿನಾಂಕ 09.10.2016 ರಂದು ಶ್ರೀ ಜಯರಾಮ ಶೆಟ್ಟಿಯವರ ನಿವಾಸಕ್ಕೆ ತೆರಳಿ ಆ ಹಣವನ್ನು ಚೆಕ್ ಮೂಲಕ ಅವರಿಗೆ ನೀಡಲಾಯಿತು. ಸಮಾಜ ಬಾಂಧವರಿಂದ ಪ್ರಶಂಸೆಗೊಳಗಾದ ಈ ಮಾನವೀಯ ನೆರವಿಗೆ ಸ್ಪಂದಿಸಿದ ದಾನಿಗಳಿಗೆ ಹೃದಯಾಂತರಾಳದ ಅಭಿನಂದನೆಗಳು.

ದೀಪಾವಳಿಯ ಸಂಭ್ರಮಾಚರಣೆಯೊಂದಿಗೆ ಕನ್ನಡ ರಾಜ್ಯೋತ್ಸವದ ಹೆಮ್ಮೆಯೊಂದಿಗೆ ನಾವೆಲ್ಲರೂ ಒಗ್ಗೂಡಿ ಸಮಾಜದ ಸವಾಲುಗಳನ್ನೆದುರಿಸಲು ಮುನ್ನುಗ್ಗೋಣ.

ವಂದನೆಗಳೊಂದಿಗೆ,

**ಸಂತೋಷ್ ಶೆಟ್ಟಿ ಜೆ.**
ಗೌರವ ಕಾರ್ಯದರ್ಶಿ

'ಕಾಲೆಳೆಯುವವರ ನಾಯಕನಾಗುವುದಕ್ಕಿಂತ ಕೈಹಿಡಿಯುವವರ ಸೇವಕನಾಗುವುದು ಶ್ರೇಷ್ಠ'
'ವಂಚಕರಿಗೆ ಕಿರೀಟವಾಗುವುದಕ್ಕಿಂತ ಉತ್ತಮರಿಗೆ ಪಾದುಕೆಯಾಗುವುದು ಶ್ರೇಷ್ಠ'

### ಯುವ ವಿಭಾಗ ಮತ್ತು ಸಮಾಜ ಸೇವಾ ವಿಭಾಗದಿಂದ

## ಸ್ವಚ್ಛ ಭಾರತ ಜಾಗೃತಿ ನಡಿಗೆ ಮತ್ತು ಅಭಿಯಾನ–1

ಯುವ ವಿಭಾಗ ಹಾಗೂ ಸಮಾಜ ಸೇವಾ ವಿಭಾಗವು ಜಂಟಿಯಾಗಿ 'ಗಾಂಧೀಜಿ ಹಾಗೂ ಲಾಲ್ ಬಹದೂರ್ ಶಾಸ್ತ್ರೀಜಿಯವರ ಜನ್ಮ ದಿನಾಚರಣೆ'ಯ ಹಿನ್ನಲೆಯಲ್ಲಿ ಬಂಟರ ಸಂಘ ಆವರಣ, ವಿಜಯನಗರದಿಂದ ಪ್ರಾರಂಭಿಸಿ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ "ಸ್ವಚ್ಛ ಭಾರತ ಜಾಗೃತಿ ನಡಿಗೆ ಮತ್ತು ಅಭಿಯಾನ"ವನ್ನು ಹಮ್ಮಿಕೊಂಡಿತ್ತು.

ಅತ್ತಿಗುಪ್ಪೆ ವಾರ್ಡ್‌ನ ಬಿಬಿಎಂಪಿ ಸದಸ್ಯರಾದ ಡಾ॥ ಎಸ್. ರಾಜುರವರು, "ಸ್ವಚ್ಛ ಭಾರತ ಅಭಿಯಾನವನ್ನು ಬಂಟರ ಸಂಘ ಹಮ್ಮಿಕೊಂಡಿರುವಂತದ್ದು ಬಹಳ ಶ್ಲಾಘನೀಯ, ಯುವಕರು ಇಂತಹ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯತೆ ಬಹಳಷ್ಟಿದೆ" ಎಂದು ತಿಳಿಸಿದರು. ಮುಖ್ಯ ಅತಿಥಿ ಗೋವಿಂದರಾಜನಗರ ವಾರ್ಡ್‌ನ ಬಿಬಿಎಂಪಿ ಸದಸ್ಯರಾದ ಶ್ರೀ ಕೆ. ಉಮೇಶ್ ಶೆಟ್ಟಿಯವರು ಸಂಘದ ಎಲ್ಲಾ ಕಾರ್ಯಗಳಿಗೆ ಸಹಕಾರ ನೀಡುವುದಾಗಿ ಮತ್ತು ಯುವಕರು ಇಂತಹ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ತೊಡಗಿಕೊಳ್ಳುವಂತೆ ಕರೆಯಿತ್ತರು.

ಅಭಿಯಾನದ ರಾಯಭಾರಿ ರಾಷ್ಟ್ರೀಯ ಹಾಗೂ ಪ್ರೊಕಬಡ್ಡಿ ಆಟಗಾರ ಪ್ರಶಾಂತ್ ರೈಯವರು "ಇಂತಹ ಉತ್ತಮ ಕಾರ್ಯದಲ್ಲಿ ನಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಬೆಂಗಳೂರಿನ ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಕ್ತಿಯನ್ನು ಪಡೆಯಲು ನಾವೆಲ್ಲರೂ ಶ್ರಮಿಸಬೇಕಾಗಿದೆ"ಯೆಂದರು.

ಅಭಿಯಾನವು ವಿಜಯನಗರ ಬಸ್ ನಿಲ್ದಾಣ ಹಾಗೂ ಸುತ್ತಲಿನ ಪರಿಸರದಲ್ಲಿ ನಡಿಗೆ ಮೂಲಕ ತೆರಳಿ ಭಿತ್ತಿ ಫಲಕ ಹಾಗೂ ಸ್ವಚ್ಛ ಭಾರತ ಸಂದೇಶದ ಗೀತೆಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಿತು. ಈ ಅಭಿಯಾನದಲ್ಲಿ 300ಕ್ಕೂ ಅಧಿಕ ಮಂದಿ ಸಂಘದ ಸದಸ್ಯರು ಹಾಗೂ ಯುವಕರು ಪಾಲ್ಗೊಂಡು ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿಸಿದರು.

## ಸ್ವಚ್ಛ ಭಾರತ ಜಾಗೃತಿ ನಡಿಗೆ ಮತ್ತು ಅಭಿಯಾನ–2

ಯುವ ವಿಭಾಗ ಹಾಗೂ ಸಮಾಜ ಸೇವಾ ವಿಭಾಗವು ಜಂಟಿಯಾಗಿ ಸ್ವಚ್ಛ ಭಾರತ ಅಭಿಯಾನದ–2ನೇ ಕಾರ್ಯಕ್ರಮವನ್ನು ದಿನಾಂಕ 23–10–2016ರಂದು ನಗರದ ಟಿ.ದಾಸರಹಳ್ಳಿ–ಜಾಲಹಳ್ಳಿ ಪ್ರದೇಶಗಳಲ್ಲಿ ಹಮ್ಮಿಕೊಂಡಿತ್ತು.

ಅಭಿಯಾನಕ್ಕೆ ಚಾಲನೆ ನೀಡಿದ ಟಿ. ದಾಸರಹಳ್ಳಿ ಶಾಸಕರಾದ ಶ್ರೀ ಎಸ್. ಮುನಿರಾಜುರವರು "ಬಂಟರ ಸಂಘವು ಈ ಪ್ರದೇಶದಲ್ಲಿ ಸ್ವಚ್ಛ ಭಾರತ ಕಾರ್ಯಕ್ರಮ ಹಮ್ಮಿಕೊಂಡು ಯುವಕರನ್ನು ತೊಡಗಿಸಿರುವುದು ನಿಜಕ್ಕೂ ಅತ್ಯಂತ ಉತ್ತಮವಾದ ಪ್ರಾರಂಭ. ನಮ್ಮ ಪರಿಸರವನ್ನು ಶುಚಿಯಾಗಿಡುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಈ ಕಾರ್ಯ ಯಶಸ್ವಿಯಾಗಲಿ" ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಸ್ಥಳೀಯ ಟಿ.ದಾಸರಹಳ್ಳಿ ಬಿಬಿಎಂಪಿ ಸದಸ್ಯರಾದ ಶ್ರೀಮತಿ ಉಮಾದೇವಿ ನಾಗರಾಜ್‌ರವರು ಪಾಲ್ಗೊಂಡು ಶುಭ ಹಾರೈಸಿದರು. ಈ ಅಭಿಯಾನದ ರಾಯಭಾರಿಯಾಗಿ ಮುಂಗಾರು ಮಳೆ–2 ಚಲನಚಿತ್ರದ ನಟಿ ಕು॥ ನೇಹಾ ಶೆಟ್ಟಿ ಭಾಗವಹಿಸಿ "ಪ್ರಧಾನಿ ಮೋದಿಯವರು ಕರೆನೀಡಿದಂತೆ ಪ್ರತಿಯೊಬ್ಬ ಪ್ರಜೆಯು ತನ್ನ ಜವಾಬ್ದಾರಿಯನ್ನು ಅರಿತು ತನ್ನ ಪರಿಸರವನ್ನು ಶುಚಿಯಾಗಿಟ್ಟರೆ ಇಡೀ ದೇಶ ಸುಂದರವಾಗುತ್ತದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ" ಎಂದರು.

ಯುವ ವಿಭಾಗದ ಅಧ್ಯಕ್ಷರಾದ ಪ್ರೇಮ್‌ಪ್ರಸಾದ್ ಶೆಟ್ಟಿಯವರು ನೆರೆದ ಅತಿಥಿಗಳನ್ನು ಸ್ವಾಗತಿಸುತ್ತ "ನಮ್ಮ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಬಹಳ ಉತ್ತಮ ಸ್ಪಂದನೆ ಸಿಕ್ಕಿದ್ದು, ಈ ಜಾಗೃತಿ ಕಾರ್ಯಕ್ರಮ ನಿರಂತರವಾಗಿ ನಡೆಸಲು ಯುವಕರೆಲ್ಲರೂ ಉತ್ಸಾಹಿಗಳಾಗಿದ್ದಾರೆ" ಎಂದರು. ಸಂಘದ ಅಧ್ಯಕ್ಷರಾದ ಡಿ. ಚಂದ್ರಹಾಸ ರೈ, ಗೌ॥ ಕಾರ್ಯದರ್ಶಿ ಸಂತೋಷ್ ಶೆಟ್ಟಿ ಜೆ. ಮತ್ತು ಇತರ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು. ಸಮಾಜ ಸೇವಾ ವಿಭಾಗದ ಛೇರ್‌ಮೆನ್ ರಾಧಾಕೃಷ್ಣ ಶೆಟ್ಟಿಯವರು ಅಭಿಯಾನಕ್ಕೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಈ ಅಭಿಯಾನದಲ್ಲಿ ಸ್ಥಳೀಯ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದು ವಿಶೇಷವಾಗಿತ್ತು.

ಕನ್ನಡ ರಾಜ್ಯೋತ್ಸವ - ವಿಶೇಷ ಲೇಖನ

# ಕರ್ನಾಟಕ ಏಕೀಕರಣದ ಅರವತ್ತು ವರ್ಷಗಳು



ಎ. ಗಿರೀಶ ರೈ

**ಕನ್ನಡ ನಾಡು ನುಡಿಗಾಗಿ ಸ್ವಾತಂತ್ರ್ಯ ಪೂರ್ವದಿಂದಲೇ ಹಲವಾರು ಹೋರಾಟಗಳು ನಡೆದಿವೆ. ಅಂದು ಕನ್ನಡ ಭಾಷಿಕರು ವಿವಿಧ ಪ್ರಾಂತ್ಯಗಳಲ್ಲಿ, ಚಿಕ್ಕ ಚಿಕ್ಕ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದು, ಸ್ವಾತಂತ್ರ್ಯ ಹೋರಾಟದೊಂದಿಗೆ ಕರ್ನಾಟಕದ ನಾಯಕರು ಏಕೀಕರಣಕ್ಕೂ ಚಳುವಳಿ ನಡೆಸಿದ್ದರು. ಭಾಷಾವಾರು ಪ್ರಾಂತಗಳ ರಚನೆಯಿಂದ ಒಂಭತ್ತು ಜಿಲ್ಲೆಗಳನ್ನು ಹೊಂದಿದ್ದ ಮೈಸೂರು ರಾಜ್ಯ ಕನ್ನಡ ಪ್ರದೇಶಗಳನ್ನು ಒಗ್ಗೂಡಿಸಿಕೊಂಡು 'ನಮ್ಮ ಚೆಲುವ ಕನ್ನಡ ನಾಡು' ಉದಯವಾಗಿ ಇಂದಿಗೆ ಅರವತ್ತು ವರ್ಷಗಳು ಸಂದಿವೆ.**

**ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವದ ಅಂಗವಾಗಿ ಕನ್ನಡದ ಅಧಿದೇವತೆ ತಾಯಿ ಭುವನೇಶ್ವರಿಗೆ ರಾಜ್ಯಾದ್ಯಂತ ಸಂಭ್ರಮದ ಪೂಜೆ, ಉತ್ಸವ, ಕನ್ನಡ ಸಾಹಿತ್ಯದ ಪರಾಮರ್ಶೆ ನಡೆಯುತ್ತದೆ. ತಾಯಿ ಭುವನೇಶ್ವರಿಯ ಕಲ್ಪನೆಯನ್ನು ಮೊದಲಿಗೆ ಕದಂಬರು ಪ್ರಾರಂಭಿಸಿದ್ದರು. ಇವರ ನಂತರ ವಿಜಯನಗರದ ಅರಸರೂ ಭುವನೇಶ್ವರಿಯನ್ನು ಪೂಜಿಸುತ್ತಿದ್ದರು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಭುವನಗಿರಿಯಲ್ಲಿ ಸುಮಾರು ಮುನ್ನೂರು ಅಡಿ ಎತ್ತರದ ಗುಡ್ಡದ ಮೇಲೆ ಭುವನೇಶ್ವರಿಯ ಮಂದಿರವಿದೆ. ಸಿದ್ದಾಪುರ ಪ್ರಾರಂಭದಲ್ಲಿ ಬನವಾಸಿಯ ಕದಂಬರ ಅಧೀನದಲ್ಲಿದ್ದು, ನಂತರ ವಿಜಯನಗರ ಸಾಮಂತರ ಆಡಳಿತಕ್ಕೆ ಸೇರಿತ್ತು. ಸಿದ್ದಾಪುರ ಹತ್ತಿರವಿರುವ ಬಿಳಗಿ ವಿಜಯನಗರ ಅರಸರ ಮಾಂಡಲಿಕರ ರಾಜಧಾನಿಯಾಗಿತ್ತು. ಬಿಳಗಿ ಅರಸರು ಕನ್ನಡ ವ್ಯಾಕರಣ ಪರಿಪೂರ್ಣತೆ ಹೊಂದಲು, ಬೆಳೆಯಲು ಅಪಾರ ಕೊಡುಗೆ ನೀಡಿದ್ದರು. ಕನ್ನಡ ಭಾಷೆ ಸುಮಾರು ಹದಿನೇಳನೇ ಶತಮಾನದ ತನಕ ಆಡು ಭಾಷೆಯಾಗಿತ್ತು. ಇಂತಹ ಸನ್ನಿವೇಶದಲ್ಲಿ ಬಿಳಗಿಯಲ್ಲಿದ್ದ ಭಟ್ಟಾಕಳಂಕ ನಾಮದ ವಿದ್ವಾಂಸ 'ಕನ್ನಡ ವ್ಯಾಕರಣ' ಗ್ರಂಥವನ್ನು ಭುವನಗಿರಿ ಹತ್ತಿರದ ಬಿಳಗಿಯಲ್ಲಿ ರಚಿಸಿದ್ದು ಕನ್ನಡ ಭಾಷೆಯ ಬಗ್ಗೆ ಪಂಡಿತರಿಗೆ ಅಸಡ್ಡೆ ಇದ್ದ ಕಾಲಘಟ್ಟದಲ್ಲಿ, ಕನ್ನಡದಲ್ಲಿ ಸಾಹಿತ್ಯ ಇದೆ, ಶಾಸ್ತ್ರ ಇದೆ ಹಾಗೂ ಪ್ರತಿಭೆ ಇದೆ ಎಂದು ವಿದ್ವಾಂಸರಲ್ಲಿ ವಾದಿಸಿ ಭಟ್ಟಾಕಳಂಕ ಕನ್ನಡಕ್ಕೆ ಸ್ಥಾನ-ಮಾನ ದೊರಕಿಸಿಕೊಟ್ಟಿದ್ದು ಭುವನಗಿರಿಯ ಮಡಿಲಲ್ಲಿ ಎಂಬುದು ಗಮನಾರ್ಹ.**

ಕರ್ನಾಟಕ ಕೇವಲ ಒಂದು ಪ್ರದೇಶ ಮಾತ್ರವಲ್ಲ. ಇದೊಂದು ವಿಶಾಲ ಪರಿಕಲ್ಪನೆ, ರಾಮಾಯಣದಲ್ಲಿ ಉಲ್ಲೇಖಿಸಿರುವ ದಂಡಾಕಾರಣ್ಯವನ್ನು ಕರ್ನಾಟಕವೆಂದು ಗುರುತಿಸಿದ್ದು, ಈ ಭೂಭಾಗವನ್ನು ಅಗಸ್ತ್ಯ ಮಹರ್ಷಿ, ಮಾನವ ವಾಸಯೋಗ್ಯ ಪ್ರದೇಶವಾಗಿ ಪರಿವರ್ತಿಸಿದ್ದರೆಂದು ಪ್ರತೀತಿ.



ಅಂತೆಯೇ ಮಹಾಭಾರತದಲ್ಲಿ ಕರ್ನಾಟಕವನ್ನು ಒಂದು ಮುಖ್ಯ ಪ್ರದೇಶವೆಂದು ಪ್ರಸ್ತಾಪಿಸಲಾಗಿದೆ. ಚಾರಿತ್ರಿಕ ಮಹತ್ವದ ಈ ಪ್ರದೇಶ ಸುಮಾರು 3ನೇ ಶತಮಾನದಲ್ಲಿ ಮೌರ್ಯ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ಕನ್ನಡ ಭಾಷೆ ಕ್ರಿಸ್ತಶಕ ಪೂರ್ವದಿಂದಲೇ ಇದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಪ್ರಾಚೀನ ಗ್ರೀಕ್ ನಾಟಕಗಳಲ್ಲಿ, ಅಶೋಕನ ಹಲವು ಶಾಸನಗಳಲ್ಲಿ ಕನ್ನಡ ಮಾತುಗಳ ಬಳಕೆಯಿತ್ತು. ಅಂತೆಯೇ ಹಲವು ಪ್ರಾಚೀನ ಗ್ರಂಥಗಳಲ್ಲಿ ಕನ್ನಡ ಕೃತಿಗಳು-ಕವಿಗಳ ಉಲ್ಲೇಖವಿದೆ. ಕನ್ನಡ ಸಾಹಿತ್ಯ ಕ್ರಿಸ್ತಶಕದ ಪ್ರಾರಂಭದಿಂದಲೇ ಪ್ರವರ್ಧಮಾನವಾಗಿ ನಂತರ ಸಮೃದ್ಧಿಯಾಗಿ ಬೆಳೆಯಿತು.

## ಕನ್ನಡದ ಮಹಾಕವಿವರ್ಯರು

ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಆಸ್ಥಾನಕವಿ ವಿಜಯನಿರ್ಮಿತ 'ಕವಿರಾಜ ಮಾರ್ಗ' ಕನ್ನಡದ ಮೊದಲ ಗ್ರಂಥ. ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತು ಅಮೂಲ್ಯ ಅಭಿಪ್ರಾಯ ಇದರಲ್ಲಿದೆ. ಕನ್ನಡ ನಾಡಿನಲ್ಲಿ ಹಲವರು ಓದದೆಯೂ ಕವಿಗಳಾಗಿ ಕಾವ್ಯ ಪ್ರಯೋಗ



ಮಾಡಿದ್ದಾರೆಂದು ಉಲ್ಲೇಖವಿದೆ. ಚಾಳುಕ್ಯ ರಾಜ ಅರಿಕೇಸರಿಯ ಆಸ್ಥಾನಕವಿ ಪಂಪ ಕನ್ನಡದ ಆದಿಕವಿ. ರಾಜ ಅರಿಕೇಸರಿಯನ್ನು ಮಹಾಭಾರತದ ಅರ್ಜುನನಿಗೆ ಹೋಲಿಸಿ ಪಂಪ ವಿರಚಿತ 'ವಿಕ್ರಮಾರ್ಜುನ ವಿಜಯ' ಮತ್ತು 'ಪಂಪಭಾರತ' ಪೌರಾಣಿಕ ಮತ್ತು ಐತಿಹಾಸಿಕ ಅಂಶಗಳನ್ನೊಳಗೊಂಡಿದ್ದು, ಭಾರತದ ಭಾಷೆಗಳಲ್ಲೇ ಪ್ರಸಿದ್ಧವಾಗಿದೆ. ಆದಿಪುರಾಣ ಪಂಪನ ಇನ್ನೊಂದು ಹೆಸರಾಂತ ಕೃತಿ. ಇವರಲ್ಲದೆ ರನ್ನ, ಪೊನ್ನ ಮತ್ತು ಜನ್ನ ಕನ್ನಡದ ಮಹಾಕವಿಗಳೆಂದು ಹೆಸರುಗಳಿಸಿರುತ್ತಾರೆ. ಈ ಕವಿವರ್ಯರನ್ನೊಳಗೊಂಡ ಕನ್ನಡ ಸಾಹಿತ್ಯ ಮುಂದಿನ ಕೆಲವು ಶತಮಾನಗಳ ತನಕ ತನ್ನ ವಿಶಿಷ್ಟತೆಯಿಂದ ಪ್ರಸಿದ್ಧಿ ಹೊಂದಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ 'Divide and Rule' ನಂತೆ ಇಂದಿನ ಕರ್ನಾಟಕದ ಒಂದು ಭಾಗ, ಮೈಸೂರು ಸಂಸ್ಥಾನದಲ್ಲಿದ್ದು, ಅಲ್ಲಿ ಮಾತ್ರ ಕನ್ನಡ ಭಾಷೆಗೆ ಪ್ರಾಧಾನ್ಯತೆ ಇತ್ತು. ಈಗಿನ ಧಾರವಾಡ ಬೆಳಗಾವಿ, ಉತ್ತರ ಕನ್ನಡ ಮತ್ತು ಬಿಜಾಪುರ ಜಿಲ್ಲೆಗಳು ಮುಂಬೈ ಪ್ರಾಂತ್ಯದ ಅಧಿಪತ್ಯಕ್ಕೆ ಸೇರಿದ್ದವು. ಇಲ್ಲಿ ಕನ್ನಡಿಗರು ಅಲ್ಪ ಸಂಖ್ಯಾತರಾಗಿದ್ದರು. ಅವಿಭಜಿತ ದಕ್ಷಿಣ ಕನ್ನಡ, ಬಳ್ಳಾರಿ, ಕೊಳ್ಳೇಗಾಲ ತಾಲ್ಲೂಕು, ತಮಿಳು, ತೆಲುಗು ಪ್ರಾಬಲ್ಯವಿದ್ದ ಮದ್ರಾಸ್ ಪ್ರಾಂತ್ಯದಲ್ಲಿದ್ದು ಇದರಲ್ಲಿ ಭೌಗೋಳಿಕ ನಿಕಟತೆ ಇರಲಿಲ್ಲ. ರಾಯದುರ್ಗ, ಸಂಡೂರು, ಮುಧೋಳ ಕಿರು ಸಂಸ್ಥಾನಗಳು ಬೇರೆ–ಬೇರೆ ಆಡಳಿತಕ್ಕೆ ಸೇರಿದ್ದು, ಶಾಪುರ, ಶಿರಹಟ್ಟಿ ಪ್ರದೇಶಗಳು ಗುಣದಾಳು ಮೊದಲಾದ ಗ್ರಾಮಗಳ ಗುಂಪು ಹೈದರಾಬಾದ್ ಸಂಸ್ಥಾನದಲ್ಲಿದ್ದು ಅಲ್ಲಿ ಉರ್ದುಗೆ ಪ್ರಾಧಾನ್ಯತೆ. ಜಮಖಂಡಿ, ಮುಧೋಳ ಸಂಸ್ಥಾನಗಳಲ್ಲಿ ಮರಾಠಿ, ಈ ಎಲ್ಲಾ ಪ್ರದೇಶಗಳಲ್ಲಿ ಕನ್ನಡ ಅಂದು ನಿರ್ಗತಿಕ ಭಾಷೆ. ಇತರ ಭಾಷೆಗಳ ಪ್ರಾಂತ್ಯಗಳಿಗೆ ಹತ್ತಿರವಿರುವ ಹೊಸೂರು, ಮಡಕಶಿರಾ ಅಲೂರು, ಆದವಾನಿ, ತಾಳವಾಡಿ, ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ ಮೊದಲಾದ ಪ್ರದೇಶಗಳಲ್ಲಿ ಕನ್ನಡದ ಧ್ವನಿ ಅತೀ ಕ್ಷೀಣವಾಗಿತ್ತು. ಉತ್ಕೃಷ್ಟ ಪರಂಪರೆ, ಸಂಸ್ಕೃತಿ ಇರುವ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು ಮತ್ತು ವಿಜಯನಗರದ ರಾಜರು ಕನ್ನಡ ಭಾಷೆಯಲ್ಲಿ ಆಡಳಿತ ನಡೆಸಿದ್ದರೂ ಕನ್ನಡ ನಾಡು ಸುಮಾರು 20 ಆಡಳಿತ ವ್ಯವಸ್ಥೆಗೆ ಸೇರಿದ್ದು, ಒಡೆದ ಕನ್ನಡಿಯಂತೆ ಸ್ಥಿತಿಗೆ ನೂಕಲ್ಪಟ್ಟಿತ್ತು.

## ಏಕೀಕರಣದ ಕಲ್ಪನೆ

ಇಚಿತಹ ಸನ್ನಿವೇಶದಲ್ಲಿ 1890ರಲ್ಲಿ ಆರಂಭವಾದ ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಏಕೀಕರಣದ ಕಲ್ಪನೆಗೆ ವೇದಿಕೆಯಾಯಿತು. ಕನ್ನಡ ಭಾಷಾ ಪ್ರದೇಶಗಳು ಒಂದಾಗಿ ಕನ್ನಡಕ್ಕೇ ಒಂದು ಪ್ರಾಂತ್ಯ ಬೇಕೆಂಬ ವಾದವನ್ನು 1906ರಲ್ಲಿ ಬೆನಗಲ್ ರಾಮಾರಾಯರು ಮುಂದಿಟ್ಟರು. ಇದರನಂತರ ಕರ್ನಾಟಕ ಏಕೀಕರಣ ಹೋರಾಟ ತೀವ್ರಗೊಂಡಿತು. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು ಏಕೀಕರಣದ ಕನಸು ಕಂಡ ಮೊದಲಿಗರಲ್ಲಿ ಒಬ್ಬರು. ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜೀಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ

### ಭಾಷಾವಾರು ರಾಜ್ಯಗಳ ಪುನರ್ ಘಟನೆಗೆ ಆಯೋಗ

ಸ್ವತಂತ್ರ್ಯ ಭಾರತದ ವಿವಿಧ ರಾಜ್ಯಗಳ ಘಟನೆಯನ್ನು ಆಯಾ ರಾಜ್ಯಗಳ ಭಾಷೆಗಳ ನೆಲೆಯಲ್ಲಿ ಪುನರ್ ರಚಿಸಬೇಕೆಂದು ದೇಶಾದ್ಯಂತ ಬೇಡಿಕೆಗಳು ಬರುತ್ತಿದ್ದವು. ಇದರಿಂದ ಆಯಾ ರಾಜ್ಯಗಳ ಅಭಿವೃದ್ಧಿ ಜನರ ಪ್ರಗತಿಗೆ ಹೆಚ್ಚಿನ ಸಹಕಾರ ಸಿಗಲಿದೆ ಎಂದು ಪರಿಗಣಿಸಲಾಗಿತ್ತು. ಇದರಂತೆ ಕೇಂದ್ರ ಸರಕಾರ ಭಾಷಾವಾರು ರಾಜ್ಯಗಳ ರಚನೆಗೆ ಸೂಕ್ತ ಸಲಹೆ–ಸಹಾಯ ನೀಡಲು, 29ನೇ ದಶಂಬರ್, 1953ರಲ್ಲಿ ಸಯ್ಯದ್ ಫಜ್ಹಲ್ ಆಲಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಶ್ರೀ ಹೃದಯನಾಥ ಖುಂಜ್ರು ಮತ್ತು ಕೆ. ಎಂ. ಪಣಿಕ್ಕರ್ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿ ಒಂದು ಲಕ್ಷದ ಹದಿನೈದು ಸಾವಿರದ ಇನ್ನೂರ ಐವತ್ತು ಮನವಿಗಳನ್ನು, ಹೆಚ್ಚಿನ ಸಂಖ್ಯೆಯುಲ್ಲಿ ಟೆಲಿಗ್ರಾಂಗಳನ್ನು ಪಡೆದು ಪರಿಶೀಲಿಸಿತ್ತು. ಇದಲ್ಲದೇ ಸುಮಾರು ಒಂಬತ್ತು ಸಾವಿರಕ್ಕೂ ಹೆಚ್ಚಿನ ಜನರನ್ನು ಸಂದರ್ಶಿಸಿ ಅಭಿಪ್ರಾಯಗಳನ್ನು ಪಡೆದಿತ್ತು. ದೇಶದಲ್ಲಿ ವಿವಾದಿತ ಪ್ರದೇಶಗಳನ್ನು ವೀಕ್ಷಿಸಲು ಸಮಿತಿ ದೇಶಾದ್ಯಂತ ಸ್ವತಹ: ಮೂವತ್ತೆಂಟು ಸಾವಿರ ಮೈಲಿಗಳಷ್ಟು ಪ್ರವಾಸ ಕೈಗೊಂಡಿತ್ತು. ಸಮಿತಿ ಸರ್ಕಾರಕ್ಕೆ ವರದಿಯನ್ನು 30ನೇ ದಶಂಬರ್, 1955 ರಂದು ಸಲ್ಲಿಸಿತು.

ಏಕೀಕರಣದ ಪ್ರಸ್ತಾಪಮಾಡಿದ ಸರ್. ಸಿದ್ದಪ್ಪ ಕಂಬಳಿ, ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಕ್ಕೆ ಒಂದೇ ರೀತಿಯಲ್ಲಿ ಹೋರಾಡಿದ ಎಸ್. ನಿಜಲಿಂಗಪ್ಪ, ಡಾ. ಚೆನ್ನಬಸಪ್ಪ ಪಟ್ಟದೇವರು, ಕೆ.ಎಫ್. ಪಾಟೀಲರು, ಕೆಂಗಲ್ ಹನುಮಂತಯ್ಯ, ಅಂದಾನಪ್ಪ ದೊಡ್ಡಮೇಟಿ, ಆರ್.ಆರ್. ದಿವಾಕರ್, ಜಯದೇವಿತಾಯಿ ಲಿಗಾಡೆ ಮೊದಲಾದವರು ಕರ್ನಾಟಕ ಏಕೀಕರಣಕ್ಕೆ ಹೋರಾಟ ನಡೆಸಿದ ಪ್ರಮುಖರು. ದಕ್ಷಿಣ ಕನ್ನಡ ಜಿಲ್ಲೆಯವರಾದ ಕೆ.ಬಿ. ಜಿನರಾಜ ಹೆಗ್ಗಡೆ, ಕೆ.ಆರ್. ಕಾರಂತರು, ಎ.ಬಿ. ಶೆಟ್ಟಿ, ಡಾ. ಕೆ.ಕೆ. ಹೆಗ್ಡೆ ಮತ್ತು ಡಾ. ಕೆ. ನಾಗಪ್ಪ ಆಳ್ವ ಮತ್ತಿತರರು ಏಕೀಕರಣದ ಮುಂಚೂಣಿಯಲ್ಲಿದ್ದವರು.

## ಚೆಲುವ ಕನ್ನಡನಾಡಿನ ಉದಯ

ಇವರೆಲ್ಲರ ಹೋರಾಟದಿಂದ ಭಾಷಾವಾರು ಪ್ರಾಂತ್ಯಗಳ ವಿಂಗಡನೆ ಸಮಿತಿಯ ಶಿಫಾರಸ್ಸಿನಂತೆ ಪುನರ್‌ರಚಿತ ಮೈಸೂರು ರಾಜ್ಯ 1956ರ ನವೆಂಬರ್ ಒಂದನೇ ತಾರೀಕಿನಂದು ಅಸ್ತಿತ್ವಕ್ಕೆಬಂತು, ಹಲವು ಕನ್ನಡ ಭಾಷಾ ಭಾಗಗಳು ಹೊರಗುಳಿದರೂ ಪ್ರಮುಖವಾಗಿ ಕಾಸರಗೋಡು, ಮಡಕಶಿರ, ತಾಳವಾಡಿ ಮೊದಲಾದ ಅಚ್ಚಕನ್ನಡ ಪ್ರದೇಶಗಳನ್ನು ಇತರ ರಾಜ್ಯಗಳಿಗೆ ಸೇರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದ ಕಾಸರಗೋಡನ್ನು ಕೇರಳ ರಾಜ್ಯದಲ್ಲಿ ಸೇರಿಸಿ ರಾಜ್ಯ ಪುನರ್ ವಿಂಗಡಣ ಸಮಿತಿ ಕರ್ನಾಟಕಕ್ಕೆ, ಕನ್ನಡ ಭಾಷೆಗೆ ಅನ್ಯಾಯವೆಸಿಗಿದೆ. ನೂತನ ಮೈಸೂರು ರಾಜ್ಯದ ಉದಯವನ್ನು ಬೆಂಗಳೂರಿನಲ್ಲಿ ನವೆಂಬರ್ 1, 1956 ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರು ವಿಧಿವತ್ತಾಗಿ



P. Kalinga Rao



ಉದ್ಘಾಟಿಸಿದರು. ಸಮಾರಂಭದಲ್ಲಿ ಕನ್ನಡದ ಹೆಸರಾಂತ ಗಾಯಕ ಶ್ರೀ ಪಿ. ಕಾಳಿಂಗರಾವ್‌ರವರು **'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'** ಹಾಡನ್ನು ಸುಶ್ರಾವ್ಯವಾಗಿ ಹಾಡಿದ್ದರು.

ಇದನ್ನು ಮೆಚ್ಚಿದ ರಾಷ್ಟ್ರಪತಿಯವರು ಕಾಳಿಂಗರಾಯರಿಗೆ ಸಮಾರಂಭದ ವೇದಿಕೆಯಲ್ಲೇ ಐದುನೂರು ರೂಪಾಯಿ ನಗದು ಬಹುಮಾನ ನೀಡಿ ಸನ್ಮಾನಿಸಿದ್ದರು.

ಮೈಸೂರಿನ ಮಹಾರಾಜ ಜಯಚಾಮರಾಜ ಒಡೆಯರ್ ರಾಜ್ಯಪಾಲರಾಗಿ, ಶ್ರೀ ಎಸ್. ನಿಜಲಿಂಗಪ್ಪನವರು ನೂತನ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಇದರೊಂದಿಗೆ ಹನ್ನೆರಡು ಸದಸ್ಯರ ಮಂತ್ರಿಮಂಡಲ ಅಧಿಕಾರವಹಿಸಿಕೊಂಡಿತು. ಮಂಗಳೂರಿನಿಂದ ಎ.ಬಿ. ಶೆಟ್ಟಿ ಕೊಡಗಿನ ಸಿ.ಎಂ. ಪೂಣಚ್ಚ, ಕಡಿದಾಳ್ ಮಂಜಪ್ಪ, (Out going CM) ಹೆಚ್.ಕೆ. ವೀರಣ್ಣ ಗೌಡ, ಎಂ.ವಿ. ರಾಮರಾವ್, ಆರ್. ಚೆನ್ನಗರಾಮಯ್ಯ, ಟಿ. ಮರಿಯಪ್ಪ ಭೀಮಪ್ಪ ನಾಯಕ್, ಜಗನ್ನಾಥರಾವ್, ಹೆಚ್.ಎಸ್. ರುದ್ರಪ್ಪ ಮತ್ತು ಎಂ.ಪಿ. ಪಾಟೀಲ್‌ರವರ ಮಂತ್ರಿಮಂಡಲದಲ್ಲಿದ್ದರು. ರಾಜ್ಯದ ಉಚ್ಚನ್ಯಾಯಲಯದ ಪ್ರಥಮ ಮುಖ್ಯ ನ್ಯಾಯಮೂರ್ತಿಯಾಗಿ ಜಸ್ಟೀಸ್ ಆರ್. ವೆಂಕಟರಾಮಯ್ಯ, ನ್ಯಾಯಮೂರ್ತಿಗಳಾಗಿ ಜಸ್ಟೀಸ್ ನಿಟ್ಟೂರು ಶ್ರೀನಿವಾಸ ರಾವ್ ಮತ್ತು ಜಸ್ಟೀಸ್ ಹೆಚ್. ಹೊಂಬೇಗೌಡರವರು ಪ್ರಮಾಣ ವಚನ ಸ್ವೀಕರಿಸಿದರು. ಇದರಿಂದ ಕನ್ನಡಿಗರ ಬಹುಕಾಲದ ಕನಸು ನನಸಾಯಿತು. ನಂತರ 1973ರಲ್ಲಿ ರಾಜ್ಯಕ್ಕೆ ಕರ್ನಾಟಕವೆಂದು ಪುನರ್ ನಾಮಕರಣ ಮಾಡಲಾಯಿತು.

ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 1973, ನವೆಂಬರ್ 1 ರಂದು ರಾಜ್ಯವನ್ನು ಕರ್ನಾಟಕವೆಂದು ಪುನರ್ ನಾಮಕರಣ ಮಾಡಲಾಯಿತು.

## ಮಹಿಳಾ ವಿಭಾಗ – ದಸರಾ ಆಚರಣೆ

ಬಂಟರ ಸಂಘ ಬೆಂಗಳೂರು, ಮಹಿಳಾ ವಿಭಾಗದ ವತಿಯಿಂದ ದಸರಾ ಹಬ್ಬವನ್ನು ಅಕ್ಟೋಬರ್ 1ನೇ ತಾರೀಖಿನಂದು ಅದ್ದೂರಿಯಾಗಿ ಆಚರಿಸಲಾಯಿತು. ಕುಮಾರಿ ಶರಣ್ಯ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀಯುತ ಡಿ. ಚಂದ್ರಹಾಸ ರೈ ಮತ್ತು ಇತರ ಪದಾಧಿಕಾರಿಗಳು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ಮಹಿಳೆಯರಿಂದ ನಡೆದ ದುರ್ಗಾಪೂಜೆಯ ನಂತರ ಅರಿಶಿನ–ಕುಂಕುಮ ವಿತರಣೆಯಾಯಿತು. 'ಆರ್ಟ್ ಆಫ್ ಲಿವಿಂಗ್'ನ ರಾಮದಾಸ್ ಮತ್ತು ತಂಡದವರಿಂದ ಭಜನೆ ಹಾಗೂ ಕು॥ ದಿಶಾ ಶೆಟ್ಟಿ ಮತ್ತು ತಂಡದವರಿಂದ 'ಐಗಿರಿ ನಂದಿನಿ' ನೃತ್ಯ ಪ್ರದರ್ಶನವು ಜರುಗಿತು. ತದನಂತರ ಸುಂದರರಾಮ ಶೆಟ್ಟಿ ನಗರದ ಅನುರಾಧ ಮತ್ತು ತಂಡದವರು ಹಾಗೂ ಜಯಶ್ರೀ ಕೆ. ಶೆಟ್ಟಿ ಮತ್ತು ತಂಡದವರು ದಾಂಡಿಯ ನೃತ್ಯವನ್ನು ಪ್ರದರ್ಶಿಸಿದರು.

ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಅಮೃತಾ ಎಸ್. ಶೆಟ್ಟಿಯವರು ಅತಿಥಿಗಳನ್ನು ಸ್ವಾಗತಿಸಿ, ಸಂಚಾಲಕಿ ಶ್ರೀಮತಿ ಮಾಲತಿ ಜೆ. ಶೆಟ್ಟಿಯವರು ವಂದನಾರ್ಪಣೆಗೈದರು. ಶ್ರೀಮತಿ ವಂದನಾ ವಿ. ಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ನಮ್ಮ ಆಹ್ವಾನವನ್ನು ಮನ್ನಿಸಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದುದು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯಿತು.

**ಅಮೃತ ಎಸ್. ಶೆಟ್ಟಿ**
ಚೇರ್‌ಪರ್ಸನ್ ಮಹಿಳಾ ವಿಭಾಗ

**ಮಾಲತಿ ಜೆ. ಶೆಟ್ಟಿ**
ಸಂಚಾಲಕರು ಮಹಿಳಾ ವಿಭಾಗ



## ಮುದ್ದು ಕಂದ

### ಮಕ್ಕಳ ಫೋಟೋ ಸ್ಪರ್ಧೆ

ಮಕ್ಕಳ ದಿನಾಚರಣೆಯ ಅಂಗವಾಗಿ ಸದಸ್ಯರ ಮಕ್ಕಳಿಗೆ ಫೋಟೋ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

- ಸ್ಪರ್ಧೆಗೆ 5 ವರ್ಷ ಒಳಗಿನ ಮಕ್ಕಳಿಗೆ ಮಾತ್ರ ಅವಕಾಶ.
- ಮಕ್ಕಳ ಸಹಜ, ಆಕರ್ಷಕ ಭಂಗಿಯ (16x12 ಸೆ.ಮೀ. ಅಳತೆಯ) ಕಲರ್ ಫೋಟೋಗಳನ್ನು ಕಳುಹಿಸಿ.
- ಫೋಟೋಗಳ ಜೊತೆ ಮಗುವಿನ ಹೆಸರು, ತಂದೆ–ತಾಯಿಯ ಹೆಸರು, ಸದಸ್ಯತ್ವ ಸಂಖ್ಯೆ, ವಿಳಾಸಗಳೊಂದಿಗೆ ಜನನ ಪ್ರಮಾಣ ಪತ್ರದ ಪ್ರತಿಯನ್ನು ಕಳುಹಿಸಿ.
- ಫೋಟೋಗಳನ್ನು ಕಳುಹಿಸಲು ಕೊನೆಯ ದಿನಾಂಕ: **30-11-2016.**
- ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು ಮತ್ತು ಅವರ ಫೋಟೋಗಳನ್ನು 'ಸ್ನೇಹ ಚಿಂತನೆ'ಯಲ್ಲಿ ಪ್ರಕಟಿಸಲಾಗುವುದು.
- ಸಂಪಾದಕ ಮಂಡಳಿ ತೀರ್ಮಾನವೇ ಅಂತಿಮ.

ಲಕೋಟೆ ಮೇಲೆ ಮಕ್ಕಳ ಫೋಟೋ ಸ್ಪರ್ಧೆ ಎಂದು ಬರೆದು, ಇವರಿಗೆ ಕಳುಹಿಸಿ:
**ಅಧ್ಯಕ್ಷರು, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ, ಬಂಟರ ಸಂಘ, ಬೆಂಗಳೂರು.**
ನಂ. 324, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು – 560 040.

# BUNTS' SANGHA RNS VIDYANIKETAN

## INAUGURAL FUNCTION OF SILVER JUBLIEE CELEBRATIONS



An unforgettable day for Bunts' Sangha Personnel. An eventful 25 years from 1991 till 2016 is worth recalling.

To monumentalize this journey, Bunts' Sangha RNS Vidyaniketan has planned a string of events throughout the academic year.

Silver Jubilee Inaugurals head started on 7th October, 2016 at Bunts' Sangha RTB Auditorium. The dias was decorated as a beautiful damsel. The dignitaries embellished the dias.

The Chief guest for the day was Sri M. Krishnappa, Hon'ble Minister of Housing, Govt. of Karnataka. The guest of honour was Sri B. Ramanath Rai, Hon'ble Minister for Forest, Environment and Ecology, Govt of Karnataka. We were honoured to have Sri R.N.Shetty, Chairman, Governing Council, with us to grace the occasion. Sri D. Chandrahasa Rai, President, Bunts' Sangha presided over the function. Other dignitaries present were Sri Santosh Shetty.J, Secretary, Bunts' Sangha, Sri Anandaram Shetty, Treasurer, Bunts' Sangha.

The Principal Prof. Nagesha N.S. welcomed the dignitaries on the dias and audience. The auditorium witnessed an array of dignitaries for the function. Past Presidents, Executive Committee members & Ex-officio members also blessed the occasion with their presence.

The function began with lighting of lamp by the dignitaries on the dias. Sri Santosh Shetty. J, Hon' Secretary spoke about 25 years of eventful journey of B.S.R.N.S Vidyaniketan and spoke about the importance of Silver Jubilee inaugurals. He stressed on the social equality which is the main pre-requisite essential for the smooth functioning of any institute.

To commemorate our Silver Jubilee year, a LOGO was unveiled amidst great joy and pride. Another moment to cherish was the release of



our quarterly news letter 'Pratibimba' which is a 'bird's eye view' of events of school and college for the First quarter of this academic year.

The Guest of honour for the day, Sri B.Ramanath Rai expressed his joy and happiness for being a part of this gala event and assured all the relevant assistance for the institution. The chief guest for the day, Sri M.Krishnappa addressed the gathering and spoke high about the growth of the institution. Dr. R.N. Shetty, the doyen of R.N.S Institutions and the most honoured philanthropist, spoke

Contd. Page 12

# ಆಯುರ್ವೇದ – ಒಂದು ಜೀವನ ಪದ್ಧತಿ



ಡಾ॥ ಶಶಿಕಲಾ ರೈ
BAMS(Ayu), BAMS(Integrated), CNCC

ವಿಶ್ವದ ಬಳಕೆಯಲ್ಲಿರುವ ಅನೇಕ ವೈದ್ಯಕೀಯ ಪದ್ಧತಿಗಳಲ್ಲಿ ಆಯುರ್ವೇದವು ಒಂದು. ಆಯುರ್ವೇದ ಪದ್ಧತಿಯು ಅನಾದಿ ಹಾಗೂ ನಿತ್ಯ. ಆಯುರ್ವೇದ ಎಂಬ ಪದವು ಆಯು ಮತ್ತು ವೇದ ಎಂಬ ಎರಡು ಪದಗಳನ್ನು ಹೊಂದಿದೆ. ಆಯು ಎಂದರೆ ಜೀವಿತ ಕಾಲ, ವೇದ ಎಂದರೆ ಜ್ಞಾನ; ಆದ್ದರಿಂದ ಆಯುರ್ವೇದ ಒಂದು ಜೀವನ ವಿಜ್ಞಾನ, ಅಂದರೆ ಆಯುರ್ವೇದವು ಕೇವಲ ರೋಗನಾಶಕ ಪದ್ಧತಿಯಷ್ಟೇ ಆಗಿರದೆ ಒಂದು ಉತ್ಕೃಷ್ಟ ಜೀವನ ಪದ್ಧತಿ.

## ಆಯುರ್ವೇದದ ದೃಷ್ಟಿಯಲ್ಲಿ ಆರೋಗ್ಯ

ಆಯುರ್ವೇದದ ದೃಷ್ಟಿಯಲ್ಲಿ ಆರೋಗ್ಯ ಎಂದರೆ ಸಮದೋಷ; ಅಂದರೆ ತ್ರಿದೋಷಗಳಾದ ವಾತ, ಪಿತ್ತ, ಹಾಗೂ ಕಫ ದೋಷಗಳ ಸಾಮ್ಯಾವಸ್ಥೆ, ಸಮಾಗ್ನಿ–ಪಚನ ಕ್ರಿಯೆಗಳ ಸಾಮ್ಯಾವಸ್ಥೆ, ಸಪ್ತಧಾತುಗಳಾದ ರಸ, ರಕ್ತ, ಮಾಂಸ, ಮೇಧ, ಅಸ್ಥಿ, ಮಜ್ಜ ಹಾಗೂ ಶುಕ್ರ ಧಾತುಗಳ ಸಾಮ್ಯಾವಸ್ಥೆ, ಪ್ರಸನ್ನವಾದ ಆತ್ಮ, ಇಂದ್ರಿಯ ಹಾಗೂ ಮನೋ ಗುಣಗಳಾದ ಸತ್ವ, ರಜ ಹಾಗೂ ತಮೋಗುಣಗಳ ಸಾಮ್ಯಾವಸ್ಥೆ. ಈ ಎಲ್ಲದರ ಸಮಸ್ಥಿತಿ ಹಾಗೂ ಪರಸ್ಪರ ಹೊಂದಾಣಿಕೆಯೇ ಆರೋಗ್ಯ.

ಆರೋಗ್ಯ ಹಾಗೂ ಅನಾರೋಗ್ಯ ಎರಡೂ ಮಾನವನೊಂದಿಗೆ ಹುಟ್ಟಿದ ಅವಳಿಗಳು, ರೋಗ ಹೇಗೆ ಬರುತ್ತದೋ ಹಾಗೆ ಅದಕ್ಕೆ ಪರಿಹಾರವೂ ಉಂಟು, ಪರಿಪೂರ್ಣ ಪರಿಹಾರ ಎಂದರೆ ಕೇವಲ ಔಷಧಿ ಮಾತ್ರವೇ ಆಗಿರದೆ ಆಯುರ್ವೇದ ಶಾಸ್ತ್ರದಲ್ಲಿ ತಿಳಿಸಿರುವ ದಿನಚರ್ಯೆ, ಋತುಚರ್ಯೆ, ಮನೆ ಹಾಗೂ ಸಮಾಜದೊಂದಿಗೆ ಇರಬೇಕಾದ ಸ್ಪಂದನ, ಉತ್ತಮ ನಡವಳಿಕೆ, ರೋಗ ಬರದಂತೆ ವಹಿಸುವ ಎಚ್ಚರ, ರೋಗ ಬಂದಾಗ ಮನೆಯಲ್ಲಿ ಗುಣಪಡಿಸಬಹುದಾದ ಸುಲಭ ಚಿಕಿತ್ಸಾ ವಿಧಾನಗಳು ಹಾಗೂ ಮುಖ್ಯವಾಗಿ ದೇಹವನ್ನು ಶುದ್ಧಿಗೊಳಿಸುವ ವಿಧಾನ. ಈಗಿನ ಜನಾಂಗ ಆಹಾರ, ವಿಹಾರ, ಉದ್ಯೋಗ, ದಿನಚರ್ಯೆ ಹಾಗೂ ಋತುಚರ್ಯೆಗಳನ್ನು ಕ್ರಮದಂತೆ ಪಾಲಿಸದಿರುವುದರಿಂದ ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಿದೆ ಇದಕ್ಕೆ ಪರಿಹಾರವನ್ನು ತಿಳಿಸಿ ಹೇಳುವ ಶಾಸ್ತ್ರವೇ ಆಯುರ್ವೇದ.

## ಆಯುರ್ವೇದದ ರೀತಿಯಲ್ಲಿ ಆಹಾರ ಪದ್ಧತಿ

ಮಾನವನ ಮೂಲಭೂತ ಅಗತ್ಯಗಳು ಗಾಳಿ, ನೀರು ಹಾಗೂ ಆಹಾರ ಮೂರನೆಯ ಅಗತ್ಯವಾದ ಆಹಾರವನ್ನು ಆಯುರ್ವೇದದಲ್ಲಿ ಹೇಳಿರುವಂತೆ ಹಿತಭುಕ್, ಮಿತಭುಕ್ ಹಾಗೂ ಋತುಭುಕ್ ಎಂದರೆ, ಹಿತವಾದ ಆಹಾರ, ಮಿತವಾದ ಆಹಾರ ಹಾಗೂ ಋತುಗಳಿಗನುಸಾರವಾಗಿ ತೆಗೆದುಕೊಳ್ಳುವ ಆಹಾರದಿಂದ ಹಲವಾರು ಕಾಯಿಲೆಗಳನ್ನು ತಡೆಯಬಹುದು.

ಆಯುರ್ವೇದದ ಪ್ರಕಾರ, ಎಲ್ಲ ರೋಗಗಳಿಗೂ ಅಜೀರ್ಣವೇ (ಆಮ) ಮುಖ್ಯ ಕಾರಣ. ಆದ್ದರಿಂದ ಆಹಾರದ ಮೊದಲಿಗೆ ಪಾಚಕಾಗ್ನಿಯು ತೀಕ್ಷ್ಣವಾಗಿರುವುದರಿಂದ ಮಧುರ ರಸವುಳ್ಳ ಆಹಾರವಾದ ಸಿಹಿ ಪದಾರ್ಥಗಳನ್ನು ಮೊದಲಿಗೆ ಸೇವಿಸಬೇಕು. ನಂತರ ಅಂದರೆ ಮಧ್ಯದಲ್ಲಿ ಕಟು, ತಿಕ್ತ, ಅಮ್ಲ, ಲವಣ ರಸಗಳುಳ್ಳ ಪದಾರ್ಥಗಳಾದ ಅನ್ನ, ಸಾಂಬಾರು ಹಾಗೂ ಪಲ್ಯಗಳನ್ನು, ಕೊನೆಯಲ್ಲಿ ಪಾಚಕಾಗ್ನಿಯನ್ನು ಶಮನ ಮಾಡುವಂತಹ ಕಷಾಯ ರಸವುಳ್ಳ ಪದಾರ್ಥಗಳಾದ ಮಜ್ಜಿಗೆಯನ್ನು ಸೇವಿಸುವುದರಿಂದ ಅಜೀರ್ಣದಿಂದ ಬರಬಹುದಾದ ಕಾಯಿಲೆಗಳನ್ನು ತಡೆಯಬಹುದು. ರಾತ್ರಿ ಹೊತ್ತು ಬೇಗ ಊಟ ಮಾಡಿ 2–3 ಗಂಟೆಯ ನಂತರ ಮಲಗುವುದರಿಂದ ಅಜೀರ್ಣದ ಸಮಸ್ಯೆಯನ್ನು ನಿವಾರಿಸಬಹುದು. ಆಯುರ್ವೇದದ ಪ್ರಕಾರ ಮಾಂಸಾಹಾರ ವರ್ಜ್ಯ ಅಲ್ಲ ಏಕೆಂದರೆ ಮಾಂಸರಸದಿಂದ ಮಾಂಸಧಾತುವನ್ನು ಹೆಚ್ಚಿಸಬಹುದು. ಆದರೆ ಸ್ಥೂಲ ದೇಹಿಗಳಿಗೆ, ಕುಳಿತೆ ಕೆಲಸ ಮಾಡುವವರಿಗೆ ಹಾಗೂ ಕೆಲವು ಕಾಯಿಲೆಗಳಲ್ಲಿ ಮಾತ್ರ ಮಾಂಸಾಹಾರ ನಿಷಿದ್ಧ.

## ಆಯುರ್ವೇದ ಔಷಧಿಗಳಲ್ಲಿ ಖನಿಜಗಳ ಬಳಕೆ

‘ಆಯುರ್ವೇದ ಔಷಧಿಯ ತಯಾರಿಕೆಯಲ್ಲಿ ಮೂರು ವರ್ಗದ ದ್ರವ್ಯಗಳನ್ನು ಬಳಸಲಾಗುತ್ತದೆ. ಸಸ್ಯಜ, ಪ್ರಾಣಿಜ ಹಾಗೂ ಖನಿಜ, ಆಯುರ್ವೇದದಲ್ಲಿ ಬಳಸುವ ಖನಿಜ ಪದಾರ್ಥಗಳನ್ನು ಔಷಧಿಗಳಾಗಿ ರೂಪಾಂತರಿಸುವುದಕ್ಕೆ ಮೊದಲು ಕಟ್ಟು ನಿಟ್ಟಿನ ಶುದ್ಧೀಕರಣಕ್ಕೆ ಒಳಪಡಿಸಿ ನಂತರ ಭಸ್ಮ ಮಾಡುವ ‘ಮಾರಣ’ ಕ್ರಮಕ್ಕೆ ಒಳಪಡಿಸಿ, ನಿರ್ದಿಷ್ಟ ಪ್ರಮಾಣದಲ್ಲಿ ನೀಡಿದಾಗ ಯಾವುದೇ ತೊಂದರೆ ಉಂಟುಮಾಡುವುದಿಲ್ಲ. ಬದಲಾಗಿ ಅಮೃತ ಸಮಾನವಾಗಿ

ಕೆಲಸ ಮಾಡುತ್ತದೆ. ಹಲವಾರು ತೀವ್ರತರ ಕಾಯಿಲೆಗಳಲ್ಲಿ ಇದರ ಪ್ರಯೋಗದಿಂದ ಒಳ್ಳೆಯ ಫಲಿತಾಂಶಗಳು ಸಿಕ್ಕಿವೆ.

ಈಗ ಮಕ್ಕಳಲ್ಲಿ ಪ್ರಚಲಿತವಾಗಿರುವ ಸ್ವರ್ಣಾಮೃತ / ಸ್ವರ್ಣಪ್ರಾಶನ ಕೂಡ ಇಂತಹುದೇ ಒಂದು ದಿವ್ಯ ಔಷಧಿ. ಇದು ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ, ಬುದ್ಧಿಶಕ್ತಿ ಹಾಗೂ ಸ್ಮರಣ ಶಕ್ತಿಗಳನ್ನು ಹೆಚ್ಚಿಸುವುದರಲ್ಲಿ ಸಂಶಯವೇ ಇಲ್ಲ. ಇದನ್ನು ಪುಷ್ಯ ನಕ್ಷತ್ರದಂದು ಕೊಡುವುದರಿಂದ ಇನ್ನೂ ಹೆಚ್ಚು ಪರಿಣಾಮಕಾರಿ.

**ಪಂಚಕರ್ಮ ಚಿಕಿತ್ಸೆ**

ಆಯುರ್ವೇದದಲ್ಲಿ ಎಲ್ಲಾ ಕಾಯಿಲೆಗಳಿಗೂ ಶಮನೌಷಧಿಗಳಿವೆ. ಈ ಶಮನೌಷಧಿಗಳಿಂದ ಗುಣವಾಗದ ಕಾಯಿಲೆಗಳಲ್ಲಿ ಶೋಧನ ಚಿಕಿತ್ಸೆಯನ್ನು ಕೊಟ್ಟು ನಂತರ ಶಮನೌಷಧಿಗಳನ್ನು ಕೊಡುವುದರಿಂದ ಹಲವಾರು ತೀವ್ರತರಹದ ಕಾಯಿಲೆಗಳನ್ನು ಗುಣಪಡಿಸಬಹುದು. ಇಂತಹ ಅತ್ಯುತ್ತಮ ಶೋಧನ ಚಿಕಿತ್ಸೆಯೆ ಪಂಚಕರ್ಮ ಚಿಕಿತ್ಸೆ, ಇಂತಹ ಚಿಕಿತ್ಸೆಯನ್ನು ನುರಿತ ವೈದ್ಯರಿಂದ ಪಡೆಯುವುದರಿಂದ ಬಂಜೆತನ, ಸ್ತ್ರೀಯರ ಮುಟ್ಟಿನ ತೊಂದರೆ, ಸ್ಥೌಲ್ಯ, ಹೀಗೆ ಹಲವಾರು ಕಾಯಿಲೆಗಳಿಂದ ಮುಕ್ತರಾಗಬಹುದು. ಪ್ರಾರಂಭಿಕ ಹಂತದಲ್ಲಿ ಮಧುಮೇಹ ರಕ್ತದೊತ್ತಡ ಮೊದಲಾದ ಕಾಯಿಲೆಗಳಿಂದಲೂ ಮುಕ್ತರಾಗಬಹುದು.

ಆಯುರ್ವೇದವು ಕಾಯಿಲೆಗಳನ್ನು ಗುಣಪಡಿಸುವಂತಹ ಒಂದು ವೈದ್ಯಕೀಯ ಪದ್ಧತಿ ಮಾತ್ರವಾಗಿರದೆ ಆಹಾರ, ವಿಹಾರಗಳ ವಿಧಾನಗಳನ್ನು ತಿಳಿಸಿಕೊಡುವಂತಹ ಒಂದು ಜೀವನ ವಿಜ್ಞಾನ. ಅದನ್ನು ಅರಿತುಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಆರೋಗ್ಯವಂತರಾಗಿ ಉತ್ತಮ ಜೀವನವನ್ನು ನಡೆಸಬಹುದು.

# ದತ್ತಿ ನಿಧಿ ಸ್ಮಾರಕ ಪ್ರಶಸ್ತಿಗೆ ರೂ. 3 ಲಕ್ಷ ದೇಣಿಗೆ

ಸಂಘದ ದತ್ತಿ ನಿಧಿ ಪ್ರಶಸ್ತಿಗೆ ದಿವಂಗತ ಶ್ರೀ ವಂಡಾರು ತೆಂಕಬೆಟ್ಟು ಶ್ರೀ ಬಾಲಕೃಷ್ಣ ಶೆಟ್ಟಿಯವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಬಿ. ಶೆಟ್ಟಿಯವರು ನೂತನ ದತ್ತಿ ನಿಧಿ ಪ್ರಶಸ್ತಿಯನ್ನು ಕೊಡಮಾಡಿರುತ್ತಾರೆ. ಇವರ ಪುತ್ರ ಡಾ। ನಂದಪ್ರಸಾದ್ ಶೆಟ್ಟಿಯವರು ದಿನಾಂಕ 22-10-2016 ರಂದು 3 ಲಕ್ಷ ರೂ.ಗಳ ಚೆಕ್ಕನ್ನು ಸಂಘದ ಅಧ್ಯಕ್ಷರಿಗೆ ಪದಾಧಿಕಾರಿಗಳ ಸಮ್ಮುಖದಲ್ಲಿ ಹಸ್ತಾಂತರಿಸಿದರು.

**ಅಜಿತ್ ಹೆಗ್ಡೆ .ಕೆ**
ಸಂಚಾಲಕರು, ವಿದ್ಯಾರ್ಥಿವೇತನ ಸಮಿತಿ



ಈ ದತ್ತಿ ನಿಧಿ ಪ್ರಶಸ್ತಿಗೆ ವಾಣಿಜ್ಯ ಪದವಿಯಲ್ಲಿ ಗರಿಷ್ಠ ಅಂಕಗಳೊಂದಿಗೆ ತೇರ್ಗಡೆಯಾಗಿ, ಮುಂದಿನ ಸ್ನಾತಕೋತ್ತರ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಅರ್ಹರಾಗಿರುತ್ತಾರೆ. ಶ್ರೀಮತಿ ಪ್ರೇಮಾ ಬಿ. ಶೆಟ್ಟಿಯವರ ಸಾಮಾಜಿಕ ಕಳಕಳಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

**–ರಮಿತ್ ಬಿ. ಶೆಟ್ಟಿ**
ಅಧ್ಯಕ್ಷರು, ವಿದ್ಯಾರ್ಥಿವೇತನ ಸಮಿತಿ

*from page 10*

exclusively about Sri M. Krishnappa's kind gesture and contributions to the growth of the institution. Chairman expressed his gratitude to all Ex-Presidents, Office bearers and Executive Committee members of Bunts' Sangha for their support.

A brief and effective speech of Sri Chandrahas Rai, President of Bunts' Sangha was very heart warming. Vote of thanks was rendered by the Vice-Principal, Ms. Anju Naik.

The function came to an end with colourful performances of school and college students followed by distribution of sweets to the students.

# CLEAN MIND MAKES A HEALTHY SOCIETY

***"You will always have to live with yourself, and it is to your best interest to see that you have good company -- a clean, pure, straight, honest, upright, generous, magnanimous companion."***
***-Orison Swett Marden***



**Prof. B.M.Hegde**

**Swacha Bharat,** a passionate slogan given by our beloved Prime Minister, Narendra Bhai Modiji, is slowly but surely turning this country into a healthy nation. That needs to be coupled with internal cleanliness to produce a new generation of Indians who live for others and enjoy in giving. Thena Thyakthena Bhunjithaha-they rejoice in giving. For long term results our educational system must internalise this external and internal cleaning into our curriculum. A clean India is a healthy India which in turn is a wealthy India. Cleanliness is true Godliness. Let each Indian take an oath to make a change in him/her for the transformation of the whole nation.

All of us take bath daily, may be even twice daily, to get rid of the dirt, grime, germs and all the unwanted things from our body's outer surface to keep ourselves healthy. However, we never try and cleanse the mind, which harbours more deadly poisons that could destroy us very easily. Most of us wonder as to where the human mind is, knowing full well that we cannot see the mind as we see our hands or feet. The mind is an integral part of the body and resides in every cell in the subatomic quantum level. This quantum concept of the mind explains many of the intricacies of the mind that were hitherto a mystery and did not come under scientific scrutiny. With the advances in quantum physics and the realisation that the mind (consciousness) is the one, which observes everything; even in the most complicated scientific experiments. Human body has between 50-120 trillion individual cells, each of which has its mind at the cell wall with the antennae ready to receive signals from the universal consciousness (universal mind).). While every human cell loves another cell in the body, these body cells also love other living creatures' cells.

The mind, thus defined, is the source of all our thoughts that, in turn, direct all our actions. The mind does not reside in the human brain. There are basically two kinds of thoughts-positive and negative. While the former help the growth and development of the organism, the latter, the negative thoughts, are now known to be at the root of all our ills on this planet, beginning with the simple common cold to the deadly heart attacks, strokes, and even cancer, the all-pervasive destroyer!

Study after study of the risk factor hypotheses has revealed the vital role played by negative destructive emotions are the major killers. The John Hopkins' student study, the London White Hall study, and the Scandinavian study of men with heart attacks showed the major role played by frustration, hostility and depression in this disease. Similarly depression, with or without treatment, came up as the single most dangerous predisposing factor for growth and maintenance of cancers,3 with anger as the leading cause of stroke! The simple summary is

that it is not what one eats that kills him, but it is what eats one that kills him.

All the negative emotions are fed into our minds after we come into existence. In the name of civilization our environment makes an effort to inject all these negative feelings, basically related to the monetary economy that we inherited in the last few hundred years. Our ancestors that lived in the forests for thousands of years were innocent people without any of these negative thoughts but could have been physically more cruel when in danger. Emerson was not wrong when he said, "if mankind would have an end it would be as a result of our present civilization." Today man's greatest enemy is man himself!

The basis of monetary economy is competition. Competing with others is mediocrity, but competing with oneself is excellence. The present society has evolved to respect money and powers, thus making man hate another of his species leading to unhealthy competition. In a quest for achievement we drive our younger generation into the bottomless pit of hatred. Our educational system does not inculcate values in the young mind. Spiritual quotient is as important as the intelligent quotient and emotional quotient in education but the first and the last are totally missing in the present system. When the negative feelings have taken root firmly, even if one realises the mistake, it takes a long time to flush one's mind of those devils. The aim of education should be to prepare a healthy mind and not just a wealthy career as is being done now. Healthy mind is defined as a mind that has "enthusiasm to work and enthusiasm to be compassionate." Thus defined India will have two and a half billion hands to work and India will have no hatred which rids itself of wars, terrorism and hatred- a true heaven on earth.

Indian Yoga and praanaayaama are but the cleansing bath soaps of cleaning the mind. The negative feelings arising in the mind are swept away through the broomstick of praanaayaamaa. Regular physical exercise, especially outdoor walking, enjoying the bounties of Nature en route would add to the perks. Diet enriched with fruits and vegetables could be an added bonus. Small regular meals four to five times a day help keep the internal environment within the limits of healthy fluctuations of the multifarious functions of the body.

Man lives for others. Helping others is the rent one pays for the comforts one enjoys in society. Molecular biology has taught us that even the thought of helping others brings on favourable changes in the cells of the immune system to prevent diseases! Praying for others is very effective as shown by a couple of well controlled prospective studies done in the US. In addition, praying for others helps one to see life in a better perspective. It gives purpose to life and makes life worth living, avoiding depression. The latter is the greatest epidemic of the West these days. Breathe away to happiness and glory! Bath for the mind consists in daily replacing our negative thoughts like hatred greedy jealousy, anger and pride with positive thoughts like compassion, camaraderie, co-operation, empathy, and enthusiasm to work and love.

***"Cleanliness may be defined to be the emblem of purity of mind."***

***-Joseph Addison***

## ಬಂಟರ ಸಂಘ ಬೆಂಗಳೂರು

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

ಆತ್ಮೀಯ ಸಮಾಜ ಬಾಂಧವರೇ,

**ಸಂಘದ 2015–16 ನೇ ಸಾಲಿನ ಈ ಕೆಳಗಿನ ವಿವಿಧ ದತ್ತಿ ನಿಧಿ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.**

1. ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'**
2. ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'**
3. ಶ್ರೀ ಮುಲ್ಕಿ ಸುಂದರರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತಮ ವಾಣಿಜ್ಯ ವಿದ್ಯಾರ್ಥಿ'**
4. ಶ್ರೀ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಸರ್ವತೋಮುಖ ಪ್ರತಿಭಾನ್ವಿತ ವಿದ್ಯಾರ್ಥಿನಿ'**
5. ಶ್ರೀ ಚಾರ್ಮಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ – **'ಅತ್ಯುತಮ ಕಾನೂನು ವಿದ್ಯಾರ್ಥಿ'**
6. ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ದಂತ ವೈದ್ಯಕೀಯ ವಿದ್ಯಾರ್ಥಿ'**
7. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ – **ಅತ್ಯುತ್ತಮ ಬಿ.ಎಸ್ಸಿ. (ಕೃಷಿ)/ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ**
8. ಶ್ರೀ ಎಚ್.ಟಿ. ಭಂಡಾರಿ ಪ್ರಶಸ್ತಿ – **'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'**
9. ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ – ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
10. ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ– **'ವಿವಿಧ ಕ್ಷೇತ್ರದಲ್ಲಿನ ಸರ್ವತೋಮುಖ ಪ್ರತಿಭೆ' ಗಾಗಿ (ವಿದ್ಯಾರ್ಥಿನಿ)**
11. ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಬಿ.ಇ.'** (ಎಲೆಕ್ಟ್ರಾನಿಕ್ಸ್) ಅಥವಾ ಇತರೆ ವಿಷಯದಲ್ಲಿ **'ಇಂಜಿನಿಯರಿಂಗ್ ಪದವಿ'**
12. ರಕ್ಷಾ ರೈ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ**
13. ಮುಲ್ಲದ್ ಲಕ್ಷ್ಮೀ ಶೀನಪ್ಪ ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ಪಶು ವಿಜ್ಞಾನ ವಿದ್ಯಾರ್ಥಿ'** ಅಥವಾ **'ಪಶುವಿಜ್ಞಾನ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ**
14. ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'**
15. ಶ್ರೀ ಮಾರಾಳಿಮನೆ ಅನಂತ್ ಶೆಟ್ಟಿ ಸ್ಮಾರಕ ಪ್ರಶಸ್ತಿ– **'ಅತ್ಯುತಮ ನೇತ್ರ ವೈದ್ಯ'** ಅಥವಾ **'ಯಾವುದೇ ವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ'**
16. ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ನೃತ್ಯ'**ದಲ್ಲಿನ ವಿಶೇಷ ಸಾಧನೆಗಾಗಿ
17. ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಕಾನೂನು ವಿದ್ಯಾರ್ಥಿ'**
18. ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'**
19. ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'**
20. ವಂಡಾರು ತೆಂಕಬೆಟ್ಟು ಶ್ರೀ ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – ವಾಣಿಜ್ಯ ಪದವಿ ಗಳಿಸಿ ಸ್ನಾತಕೋತ್ತರ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ ವಿದ್ಯಾರ್ಥಿನಿ

ಪ್ರಸಕ್ತ ಸಾಲಿನಲ್ಲಿ ಶಿಕ್ಷಣವನ್ನು ಪೂರೈಸಿದ ಈ ಮೇಲಿನ ಯಾವುದೇ ಪ್ರಶಸ್ತಿಗೆ ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿಯ ಪ್ರತಿ, ಇತ್ತೀಚಿನ ಭಾವಚಿತ್ರ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ದಿನಾಂಕ 10.01.2017 ರ ಒಳಗಾಗಿ ಸಂಘದ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2017 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಅಜಿತ್ ಹೆಗ್ಡೆ ಕೆ.**
ಸಂಚಾಲಕರು, ವಿದ್ಯಾರ್ಥಿ ವೇತನ ಸಮಿತಿ

**ರಮಿತ್ ಬಿ. ಶೆಟ್ಟಿ**
ಚೇರ್‌ಮೆನ್, ವಿದ್ಯಾರ್ಥಿ ವೇತನ ಸಮಿತಿ

# ಬಂಟರ ಸಂಘ ಬೆಂಗಳೂರು

**ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಕೂಟದ ಉದ್ಘಾಟನಾ ಸಮಾರಂಭ**

ಉದ್ಘಾಟಕರು:

**ಅಭಿಷೇಕ್ ಶೆಟ್ಟಿ**

ಚಿನ್ನದ ಪದಕ ವಿಜೇತ ರಾಷ್ಟ್ರೀಯ ಕ್ರೀಡಾಪಟು

ಅಧ್ಯಕ್ಷತೆ:

**ಚಂದ್ರಹಾಸ ರೈ ಡಿ.**

ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

ದಿನಾಂಕ: **13.11.2016, ಭಾನುವಾರ, ಸಮಯ ಪೂರ್ವಾಹ್ನ 09.00 ಘಂಟೆ**

ಸ್ಥಳ: **ಸಾಯಿ ಕ್ರೀಡಾಂಗಣ**

ಜ್ಞಾನಭಾರತಿ ಆವರಣ, ನಾಗರಬಾವಿ, ಬೆಂಗಳೂರು

ಸರ್ವರಿಗೂ ಆದರದ ಸ್ವಾಗತ

**ವಿಶೇಷ ಸೂಚನೆ:** ಬೆಳಿಗ್ಗೆ 8.30 ಕ್ಕೆ ಸಂಘದ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಿಂದ ಕ್ರೀಡಾ ಜ್ಯೋತಿಯ ಮೆರವಣಿಗೆ ನಡೆಯಲಿರುವುದು. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

## ಬಂಟರ ಸಂಘ ಬೆಂಗಳೂರು
## ಕಾನೂನು ವಿಭಾಗ
## ಉಚಿತ ಕಾನೂನು ಸಲಹಾ ಕೇಂದ್ರ

ಬೆಂಗಳೂರು ಬಂಟರ ಸಂಘದ ಕಾನೂನು ವಿಭಾಗವು ಸಂಘದ ಸದಸ್ಯರಿಗೆ ಕಾನೂನು ನೆರವು ದೊರಕಿಸುವ ದೃಷ್ಟಿಯಿಂದ ಸಂಘದ ಕಛೇರಿಯಲ್ಲಿ **'ಉಚಿತ ಕಾನೂನು ಸಲಹಾ ಕೇಂದ್ರ'**ವನ್ನು ಪ್ರಾರಂಭಿಸಿದೆ. ಪ್ರತಿ ತಿಂಗಳು 2ನೇ ಶನಿವಾರ ಆಯಾ ವಿಷಯಗಳಲ್ಲಿ ಪರಿಣತರಾದ ನ್ಯಾಯಾವಾದಿಗಳು, ಕಾನೂನು ತಜ್ಞರು ಉಚಿತ ಕಾನೂನು ಸಲಹೆ, ನೆರವು ಹಾಗೂ ಆಪ್ತ ಸಮಾಲೋಚನೆಗಾಗಿ ಸಂಘದ ಕಛೇರಿಯಲ್ಲಿ ಲಭ್ಯವಿರುತ್ತಾರೆ.

ಸಂಘದ ಸದಸ್ಯರು ಕಾನೂನಿಗೆ ಸಂಬಂಧಿಸಿದ ಯಾವುದೇ ವಿಷಯವಿದ್ದಲ್ಲಿ ಸಂಘದ ಕಛೇರಿಗೆ ಸಂಕ್ಷಿಪ್ತವಾಗಿ ಲಿಖಿತ ರೂಪದಲ್ಲಿ ಒಂದು ವಾರ ಮುಂಚಿತವಾಗಿ ತಿಳಿಸಿದಲ್ಲಿ ನುರಿತ ವಕೀಲರು ಹಾಗೂ ಕಾನೂನು ಪರಿಣತರು ಸಂಘದ ಕಛೇರಿಯಲ್ಲಿ ಲಭ್ಯವಿದ್ದು, ತಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

**ದೂರವಾಣಿ: 080–23399323 / 23399635** । ಇ–ಮೇಲ್ : **info@buntsanghablr.com**

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಶಂಕರ ಶೆಟ್ಟಿ ಕೆ.**
ಸಂಚಾಲಕರು, ಕಾನೂನು ವಿಭಾಗ

**ಡಾ॥ ಉಮಾನಾಥ ಶೆಟ್ಟಿ ವೈ.**
ಛೇರ್‌ಮ್ಯಾನ್, ಕಾನೂನು ವಿಭಾಗ


ಕೆನರಾ ಬ್ಯಾಂಕ್
ಭಾರತ ಸರ್ಕಾರದ ಒಂದು ಉದ್ಯಮ
Canara Bank
A Government of India Undertaking
Together We Can
Online Instant In-Principle Sanction
Let two beautiful dreams come true in just two minutes!
• Apply online @ www.canarabank.com
• Receive in-principle sanction in just 2 minutes
*Terms and conditions apply
Follow us on : @canarabanktweet
Scan for online facilities
CUSTOMER AWARENESS
Do not share your internet banking details, such as, user ID / password or your credit / debit card number / CVV / OTP with anyone - either over phone or through email
Toll Free No. 1800 425 0018
Save Trees. Save Water. Save Environment.
www.canarabank.com

ADVT.



Nitte Meenakshi Institute of Technology
An Autonomous Institution
Yelahanka, Bangalore - 560 064
NITTE
Courses Offered @ NMIT
B.E.
Computer Science & Engg. | Electronics & Communication Engg.
Information Science & Engg. | Electrical & Electronics Engg.
Mechanical Engg. | Civil Engg. | Aeronautical Engg.
M.Tech
VLSI Design & Embedded Systems | Computer Science & Engg.
Thermal Power Engg. | Machine Design | Computer Network Engg.
Structural Engg. | Renewable Energy | Digital Communication & Networking
Ph.D
Civil Engineering | Electrical & Electronics Engg.
Computer Science & Engg. | Mechanical Engg.
Electronics & Communication Engg.
Information Science & Engg. | Mathematics | Physics
Chemistry | Management Studies | Computer Applications
MBA
MCA
Accreditation & Recognition
TEQIP
For Admission details Contact
(080) 2216-7842, 2216-7800, 99866 12287
admissions@nmit.ac.in / principal@nmit.ac.in
www.nmit.ac.in
NITTE School of Management (NSM, Bangalore)
Yelahanka, Bangalore – 560 064
Phone : 080-2216-7888 | Mobile : +91 90360-04262
E-mail : admissions@nsom.ac.in
Facebook: https://www.facebook.com/NSMBangalore
Courses Offered @ NSOM
PGDM General Management
Executive PGDM
Specialisation
Finance | Banking | Marketing | Human Resource (HR)
Information Technology (IT) | International Business (IB) | Media Management
Operations and Logistics
Dr. NITTE SHANKARA ADYANTHAYA MEMORIAL
FIRST GRADE & P.U. COLLEGE
(Affiliated to Bangalore University & Dept. of P.U. Education respectively)
Yelahanka, Bangalore – 560 064
Phone: 080-6566-6958/ 080-2216-7895/ 080-2216-7960 Fax: 080-28461274
Email: nsamfgcyel@gmail.com / nsampucb@nitte.edu.in
Courses Offered
PUC - Science : PCMB & PCMC
PUC - Commerce : EBAS, EBABM, EBACS
B.Com
BBA
NITTE INTERNATIONAL SCHOOL
No.12, Myllappanahalli, Heseragetta Hobli, Yelahanka, Bangalore North.
Landline: 080-3232-2014, 080-3232-2015 Mob : +91 99723 75240
Email: nis.bangalore@rediffmail.com www.nis.ac.in
Affiliated with CBSE, New Delhi | Day cum Residential School | Kindergarten to 10+2


ADVT.


Limited Period offer
* Waiver of processing, Inspection & Documentation Charges
Grand Vijaya Housing & Vehicle Loan Carnival*
VIJAYA BANK
* conditions apply

ADVT.

# ಸೂಪರ್ ಡ್ಯಾನ್ಸರ್ ಸದ್ವಿನ್



ಬಂಟರ ಸಂಘದ ವಾರ್ಷಿಕ ನೃತ್ಯ ಸ್ಪರ್ಧೆಯ ವೇದಿಕೆಯಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳೊಂದಿಗೆ ಪ್ರೇಕ್ಷಕರನ್ನು ಮೋಡಿ ಮಾಡಿ ಚಿರಪರಿಚಿತನಾಗಿದ್ದ ಸದ್ವಿನ್ ಶೆಟ್ಟಿ ಇದೀಗ ನೃತ್ಯಕ್ಷೇತ್ರದಲ್ಲಿ ಏರಿರುವ ಎತ್ತರ ಬೆರಗುಗೊಳಿಸುವಂಥದ್ದು. ಈ ಟಿವಿಯ 'ಸೂಪರ್' ಹಾಗೂ 'ಅಧುರ್' ರಿಯಾಲಿಟಿ ಶೋಗಳಲ್ಲಿ ಫೈನಲ್‌ಗೆ, 'ದಿ ಜೂನಿಯರ್'ನ ಎರಡನೇ ರನ್ನರ್ ಅಪ್ ಹಾಗೂ 'ಜೂನಿಯರ್ ಪುನೀತ್ ರಾಜ್‌ಕುಮಾರ್' ಬಿರುದು, ಸುವರ್ಣವಾಹಿನಿಯ 'ಪುಟಾಣಿ ಪಂಟ್ರು ಸೀಸನ್ 2'ರ ವಿನ್ನರ್, ತೆಲುಗು ವಾಹಿನಿಯ 'ದಿ ಜೂನಿಯರ್' ರನ್ನರ್ ಅಪ್, ಉದಯ ಟಿವಿಯ "ಕಿಕ್" ರಿಯಾಲಿಟಿ ಶೋ ದ ಪ್ರಮುಖ ಸ್ಪರ್ಧಿಯಾಗಿ ಮಿಂಚಿರುವ ಈ ಸದ್ವಿನ್ ರಾಷ್ಟ್ರಮಟ್ಟದಲ್ಲೂ ಗಮನ ಸೆಳೆದಿರುವ ಪ್ರತಿಭಾವಂತ ಸರೋಜ್‌ಖಾನ್ ನೃತ್ಯ ಅಕಾಡೆಮಿಯ ಗೋಲ್ಡ್ ಮೆಡಲಿಸ್ಟ್ ಆಗಿರುವ ಈತ, 'ಡ್ಯಾನ್ಸ್ ಇಂಡಿಯಾ ಡ್ಯಾನ್ಸ್' (ಡಿಐಡಿ) ಮೆಗಾ ಆಡಿಶನ್‌ನಲ್ಲಿ ಆಯ್ಕೆ ಪದ್ಧತಿಗೆ ಅತೀತವಾಗಿ, ನೃತ್ಯ ಮಾಡಿದ ಕೂಡಲೇ ತನ್ನ ಆಯ್ಕೆಯನ್ನು ಖಚಿತ ಪಡಿಸಿಕೊಂಡು ದಾಖಲೆ ನಿರ್ಮಿಸಿದ್ದ. 'ಡಿಐಡಿ ಲಿಟಲ್ ಮಾಸ್ಟರ್' ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಮೊದಲ ದಕ್ಷಿಣ ಭಾರತೀಯ ಎನ್ನುವ ಹೆಗ್ಗಳಿಕೆ ಇವನದು.

ರಾಜ್ಯಮಟ್ಟದ ಸ್ಟೇಜ್ ಶೋಗಳಲ್ಲಿ ವೈಯಕ್ತಿಕ ವಿಭಾಗದಲ್ಲಿ 24 ಬಾರಿ ಪ್ರಥಮ ಬಹುಮಾನ ಹಾಗೂ ತಂಡ ವಿಭಾಗದಲ್ಲಿ 15 ಭಾರಿ ಪ್ರಥಮ ಬಹುಮಾನವನ್ನು ಪಡೆದಿರುವ ಸದ್ವಿನ್ ಉತ್ತಮ ಜಿಮ್ನಾಸ್ಟಿಕ್ ಪಟುವೂ ಆಗಿದ್ದು 'ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ'ದ ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ಗಳಿಸಿರುವುದು ಆತನ ಬಹುಮುಖ ಪ್ರತಿಭೆಗೆ ಸಾಕ್ಷಿ ದೂರದರ್ಶನದಲ್ಲಿ ನೃತ್ಯಗಳನ್ನು ನೋಡುತ್ತಾ ಹಾರಿ ಕುಣಿದು ಸರ್ಕಸ್ ಮಾಡುತ್ತಿದ್ದ ಮಗನ ಪ್ರತಿಭೆಯನ್ನು ಗುರುತಿಸಿ ನೀರುಣಿಸಿ ಪೋಷಿಸಿದವರು ಹೆತ್ತವರಾದ ಶ್ರೀ ಸತೀಶ್‌ಕುಮಾರ್ ಶೆಟ್ಟಿ ಹಾಗೂ ಶ್ರೀಮತಿ ಮಮತಾ ಶೆಟ್ಟಿ ದಂಪತಿಗಳು ಅಭಿನಂದನಾರ್ಹರು. ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ಎಂಟನೇ ತರಗತಿಯಲ್ಲಿ ಕಲಿಯುತ್ತಿರುವ ಸದ್ವಿನ್ ಅತ್ಯುತ್ತಮ ನೃತ್ಯಪಟುವಾಗಿ ದೇಶ ವಿದೇಶಗಳಲ್ಲಿ ತನ್ನ ಕೀರ್ತಿಯನ್ನು ಮೆರೆಸಲಿ ಎನ್ನುವ ಹಾರೈಕೆ ನಮ್ಮೆಲ್ಲರದು.



# ಸಾನ್ವಿ ಸಾಧನೆ

ಮೋಡಿ ಮಾಡುವ ಮಧುರ ಕಂಠದ ಸಾನ್ವಿ ಶೆಟ್ಟಿ ಇದೀಗ ದೇಶಾದ್ಯಂತ ಸಂಗೀತ ಪ್ರಿಯರ ಗಮನ ಸೆಳೆದಿರುವುದು ನಮ್ಮ ಹೆಮ್ಮೆ. ಬಂಟರ ಸಂಘದ ವಾರ್ಷಿಕ ಸ್ಪರ್ಧೆಯ ವೇದಿಕೆಯಲ್ಲಿ ಮುದ್ದಾಗಿ ಹಾಡುತ್ತಿದ್ದಾಗ ಪ್ರಕಟವಾದ ಇವಳ ಪ್ರತಿಭೆ ಹೆತ್ತವರ ನಿರಂತರ ಪ್ರೋತ್ಸಾಹ ಹಾಗೂ ಗುರುಗಳ ಸೂಕ್ತ ಮಾರ್ಗದರ್ಶನದಿಂದ ರಿಯಾಲಿಟಿ ಶೋಗಳ ಅಗ್ರ ಶ್ರೇಣಿಯ ಸ್ಪರ್ಧಿಗಳಲ್ಲಿ ಒಬ್ಬಳಾಗಿದ್ದಾಳೆ. ಈಟಿವಿಯ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮಕ್ಕೆ ಆಯ್ಕೆ ಜೀ಼ ಕನ್ನಡದ 'ಸರಿಗಮಪ ಲಿಟ್ಲ್ ಚಾಂಪ್ಸ್ ಸೀಸನ್ 10'ರಲ್ಲಿ ಸೆಮಿಫೈನಲ್, 'ಗೋಪಾಲನ್ ಸೂಪರ್ ಸಿಂಗರ್' ಕಾರ್ಯಕ್ರಮದಲ್ಲಿ ಫೈನಲ್‌ಗೆ ಹಾಗೂ ಇತ್ತೀಚೆಗೆ ರಾಷ್ಟ್ರೀಯ ವಾಹಿನಿ '&ಟಿವಿ'ಯಲ್ಲಿ 'ದಿ ವಾಯ್ಸ್ ಇಂಡಿಯಾ ಕಿಡ್ಸ್' ರಿಯಾಲಿಟಿ ಶೋನಲ್ಲಿ ಟಾಪ್ ಟೆನ್‌ನಲ್ಲಿ ಒಬ್ಬಳಾಗಿ ಮಿಂಚಿರುವುದು ಇವಳ ಸತತ ಪರಿಶ್ರಮಕ್ಕೆ ಸಾಕ್ಷಿ. ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಕಲಿಯುತ್ತಿರುವ ಈ ಪೋರಿ ನಮ್ಮ ಸಂಘದ ಸದಸ್ಯರಾದ ಶ್ರೀ ವಿನಯ್ ಶೆಟ್ಟಿ ಹಾಗೂ ಶ್ರೀಮತಿ ಪ್ರೀತಿ ಶೆಟ್ಟಿ ದಂಪತಿಗಳ ಪುತ್ರಿ ಎನ್ನುವುದು ಹೆಮ್ಮೆಯ ವಿಚಾರ. ಸಾನ್ವಿಯ ಈ ಸಾಧನೆಯ ಹಿಂದೆ ಅವಳ ಹೆತ್ತವರ ತ್ಯಾಗ ಪರಿಶ್ರಮ ಎಲ್ಲರಿಗೂ ಮಾದರಿಯಾದದು. ಉತ್ತಮ ನೃತ್ಯಪಟುವೂ ಆಗಿರುವ ಸುಶ್ರಾವ್ಯ ಶಾರೀರದ ಸಾನ್ವಿ ಶೆಟ್ಟಿ ದೇಶ ವಿದೇಶಗಳ ಸಂಗೀತ ರಸಿಕರ ಮನಗೆಲ್ಲುವ ಜನಪ್ರಿಯ ಗಾಯಕಿಯಾಗಿ ಮೆರೆಯಲಿ ಎನ್ನುವ ಹಾರೈಕೆ ನಮ್ಮೆಲ್ಲರದು.

## ಯುವ ವಿಭಾಗ ಮತ್ತು ಸಮಾಜ ಸೇವಾ ವಿಭಾಗದ ಸ್ವಚ್ಛ ಭಾರತ ಜಾಗೃತಿ ನಡಿಗೆ ಮತ್ತು ಅಭಿಯಾನ











## ಮಹಿಳಾ ವಿಭಾಗದ ದಸರಾ ಸಂಭ್ರಮ










CHARIOT
WORLD TOURS LIMITED
Great Holidays! Honest Prices
www.chariotworldtours.com
See Europe without missing India.
On a Europe tour, we make sure you get Indian food daily. So that you can comfortably enjoy the exotic destinations of Europe, while feeling at home.
SCOTLAND & LONDON TOUR
07 DAYS/06 NIGHTS
EUROPE TOUR
19 DAYS/18 NIGHTS
SCOTLAND, LONDON - EUROPE TOUR
22 DAYS/21 NIGHTS
DEPARTURE DATES FOR - 2016
Month | 4 Star Hotels | 3 Star Hotels
April | 20, 21, 23, 24 26, 27, 29, 30 | 22, 25, 28
May | 02, 04, 08, 10, 14 16, 20, 22, 26, 28 | 06, 12, 18 24, 30
June | 06, 13, 27 | 20
Jagannath Shanbhag: 9900003559 | Rajesh Hebbar: 9900062680
Follow us on /ChariotWorldToursLtd /chariotworld
Our Branches: Malleshwaram | Vijayanagar | Jayanagar | Cunningham Road | Indiranagar | RT Nagar | Whitefield Hesaraghatta | Mysore | Hubli | Davanagere
Our Franchisee Network: Vijayanagar, Majestic, Kalyan Nagar, Rajaji Nagar, Yelahanka, JP Nagar, Koramangala, New BEL Road, Raja Rajeshwari Nagar, Sahakar Nagar, Chitradurga, Tumkur, Belgaum, Hyderabad

ADVT.


MATHA Developers Pvt. Ltd.
Builders & Developers
N. Santhosh Kumar Shetty B.E. (Civil)
Managing Director
Home for All
Creating life-long bonds
Since 17 Years
mathadevelopers108@gmail.com
www.mathadevelopers.com
MATHA Jyothi Residency
Near Srinivas Institute of Technology and
NITK Engineering College Mukka, Surathkal
MATHA Residency, Mulky
N.H-66, Mulky
A Corner of Serenity
Budget Flats
18 Lakhs Onwards
(Including Vat, Service Tax and Deposits)
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
SAI MATHA GARDEN
Near Railway Station
International Airport Road
Surathkal
Highlights
• Super Market
• Library
• Yoga / Meditation Hall
• Fully Equipped Gymnasium
